ಜಂಟಿ ಪರಿಶೀಲನಾ ಸಮಿತಿಗೆ ವಿಧಾನಸಭೆಯ 15 ಹಾಗೂ ವಿಧಾನ ಪರಿಷತ್ತಿನ 5 ಸದಸ್ಯರನ್ನು ನೇಮಕ ಮಾಡಿರುವ ಪ್ರಸ್ತಾವಕ್ಕೆ ಸಭೆ ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

8. ಶಾಸನ ರಚನೆ

ಪರ್ಯಾಲೋಚನಾ ಪ್ರಸ್ತಾವ (ಮುಂದುವರಿದ ಚರ್ಚೆ)

ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ ವಿಧೇಯಕ, 2000

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :— ಮಾನ್ಯ ಅಧ್ಯಕ್ಷರೆ, 2000ನೇ ಸಾಲಿನ ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಈಗಾಗಲೇ ಸಭೆಯ ಮುಂದಿಟ್ಟಿದ್ದೇನೆ. ಇದರ ಉದ್ದೇಶವನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ, ನಮ್ಮ ಸಮಾಜದಲ್ಲಿ ಆತಂಕವುಂಟು ಮಾಡುವ ರೀತಿಯಲ್ಲಿ, ಗಂಭೀರ ಹಾಗೂ ತೀವ್ರ ಸ್ವರೂಪದಲ್ಲಿ ಜರುಗುವ ವ್ಯವಸ್ಥಿತ ರೀತಿಯ ಅಪರಾಧ ಕೃತ್ಯಗಳನ್ನು ನಿಯಂತ್ರಿಸುವುದು ಈ ಕಾಯಿದೆಯ ಉದ್ದೇಶವಾಗಿದೆ. ಇಂತಹ ಒಂದು ಅಪರಾಧ ಕೃತ್ಯ ಯಾವುದೇ ಒಂದು ಜಿಲ್ಲೆಗೆ, ರಾಜ್ಯಕ್ಕೆ, ರಾಷ್ಟ್ರಕ್ಕೆ ಸೀಮಿತವಾಗಿರದೆ, ಅಪರಾಧಮೆಸಗುವ ಅಪರಾಧಿಗಳು ಎಲ್ಲಾ ಕಡೆಗಳಲ್ಲೂ ಸರ್ವವ್ಯಾಪಿಯಾಗಿರುತ್ತಾರೆ. ಇಂತಹ ಅಪರಾಧಿಗಳ ಮೇಲೆ ನಾವು ಹತೋಟಿ ಸಾಧಿಸಬೇಕಾದರೆ ಅಥವಾ ಸಮಾಜದಲ್ಲಿ ಜರುಗುವ ಸುಲಿಗೆ, ದರೋಡೆ, ಕೊಲೆ, ಕಳ್ಳಸಾಗಾಣಿಕೆ, ರಾಷ್ಟ್ರವಿರೋಧಿ ಕೃತ್ಯ ಮುಂತಾದ ಅಪರಾಧ ಕೃತ್ಯಗಳನ್ನೆಲ್ಲಾ ನಿಲ್ಲಿಸುವುದಕ್ಕೆ ಇಂತಹ ಕಾನೂನು ಅತ್ಯಂತ ಅವಶ್ಯಕವಾಗಿದೆ. ಈ ಕಾನೂನಿನಡಿ ವಿಶೇಷ ಕೋರ್ಟುಗಳನ್ನು ಸ್ಥಾಪಿಸಿ, ಸ್ಪೆಷಲ್ ಪ್ರಾಸಿಕ್ಯೂಟರ್‌ಗಳನ್ನು ನೇಮಿಸುವುದು, ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವುದು, ಸಾಕ್ಷಿಗಳನ್ನು ಯಾರಾದರೂ ಹೆದರಿಸುವ ಪ್ರಯತ್ನ ಮಾಡಿದರೆ ಅವರಿಗೆ ರಕ್ಷಣೆ ಒದಗಿಸಿಕೊಡುವುದು, ಅದೇ ರೀತಿ ಟೆಲಿಫೋನ್, ಸೆಲ್ಯುಲಾರ್ ಫೋನ್ ಮೂಲಕ ಅಪರಾಧ ಕೃತ್ಯಗಳನ್ನು ಎಸಗುತ್ತಿದ್ದರೆ ಸರ್ಕಾರದ ಅನುಮತಿ ಪಡೆದುಕೊಂಡು ಇಂಟರಸ್ಟ್ ಮಾಡುವುದು, ಅನಂತರ ಯಾವ ಅಪರಾಧಿಗೆ ಯಾವ ರೀತಿಯಾದ ಶಿಕ್ಷೆ ವಿಧಿಸಬೇಕು ಮುಂತಾದ ಅಂಶಗಳನ್ನೆಲ್ಲಾ ಈ ವಿಧೇಯಕದಲ್ಲಿ ನಮೂದಿಸಿದ್ದೇವೆ. ಅದಕ್ಕೋಸ್ಕರ, ಈ ಕಾನೂನನ್ನು ಜಾರಿಗೆ ತಂದರೆ ಸಮಾಜದಲ್ಲಿ ನಡೆಯುತ್ತಿರುವ ಗ್ಯಾಂಗ್ ವಾರ್ಸ್, ಸುಪಾರಿ ಕೊಲೆಗಳು, ರಾಷ್ಟ್ರ ವಿರೋಧಿ ಕೃತ್ಯಗಳು ಮುಂತಾದ ಅಪರಾಧ ಕೃತ್ಯಗಳೆಲ್ಲವನ್ನೂ ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ಈಗಾಗಲೇ ಈ ಕುರಿತಾದ ಕಾನೂನು ಪಕ್ಕದ ರಾಜ್ಯವಾದ ಮಹಾರಾಷ್ಟ್ರದಲ್ಲಿ ಅಸ್ತಿತ್ವದಲ್ಲಿದ್ದು, ಅಲ್ಲಿ ಅವರು ಪರಿಣಾಮಕಾರಿಯಾಗಿ ಜಾರಿಗೆ ತರುತ್ತಿದ್ದಾರೆ. ಈ ಕಾನೂನಿನಿಂದ ಆ ರಾಜ್ಯದಲ್ಲಿ ಬಹಳಷ್ಟು ಅನುಕೂಲವಾಗಿದೆ. ಅಲ್ಲಿ ಸಮಾಜ ಘಾತುಕ ಶಕ್ತಿಗಳನ್ನು ವಿಶೇಷವಾಗಿ ದೇಶದ್ರೋಹಿ ಕೆಲಸಗಳಲ್ಲಿ ತೊಡಗಿರುವವರನ್ನು ಬಂಧಿಸಿ ಈ ಕಾನೂನಿನ ಮೂಲಕ ಶಿಕ್ಷೆ

ವಿಧಿಸುವ್ದಾರೆ. ವಿಧೇಯಕದಲ್ಲಿ ಹೈಕೋರ್ಟಿಗೆ ಅಪೀಲ್ ಹೋಗಲು ಅವಕಾಶ ಕಲ್ಪಿಸಲಾಗಿದೆ ಮತ್ತು ಈ ಕಾನೂನನ್ನು ದುರುಪಯೋಗಪಡಿಸಿಕೊಂಡವರಿಗೂ ಶಿಕ್ಷೆ ವಿಧಿಸುವ ವ್ಯವಸ್ಥೆಯಿದೆ. ಹೀಗಾಗಿ ಇದೊಂದು ಒಳ್ಳೆಯ ಕಾನೂನಾಗಿದ್ದು ಈ ಕಾನೂನಿನ ಉಸ್ತುವಾರಿಯನ್ನು ಎಸ್.ಪಿ.ಯಿಂದಿಡಿದು ಡಿ.ಜಿ.ಯವರೆಗೆ ವಹಿಸಿಕೊಡಲಾಗಿದ್ದು, ಗೃಹ ಕಾರ್ಯದರ್ಶಿಯವರನ್ನು ಇದಕ್ಕೆ ಪರ್ಮಿಶನ್ ಕೊಡುವ ಅಥಾರಿಟಿ ಎಂದು ಮಾಡಿದ್ದೇವೆ. ಆದುದರಿಂದ, ತಾವು ಈ ವಿಧೇಯಕವನ್ನು ಕೂಲಂಕುಷವಾಗಿ ಪರಿಶೀಲಿಸಿ, ವಿಧೇಯಕವನ್ನು ಅಂಗೀಕರಿಸಿಕೊಡುವುದಕ್ಕೆ ಎಲ್ಲರೂ ಒಮ್ಮತದಿಂದ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :— ಮಾನ್ಯ ಅಧ್ಯಕ್ಷರೆ, ಇದು ನಿಜವಾಗಿಯೂ ಸ್ವಾಗತಾರ್ಹವಾದ ವಿಚಾರ. ಇಡೀ ಜಗತ್ತಿನಲ್ಲಿ ಒಂದು ಕೇಂದ್ರ ಬಿಂದುವಾಗಿ ಬೆಳೆಯುತ್ತಿರುವ ಬೆಂಗಳೂರಿನಲ್ಲಿ ಈ ರೀತಿಯಾದ ಮಾಫಿಯಾ, ಭೂಗತ ಜಗತ್ತಿನ ದೊರೆಗಳು ತಮ್ಮ ಆಶ್ರಮ ಸ್ಥಾನವನ್ನು ಸ್ಥಾಪಿಸಲು ಪ್ರಯತ್ನ ಮಾಡುತ್ತಿರುವ ಈ ಸಂದರ್ಭದಲ್ಲಿ ಇದನ್ನು ತರುತ್ತಿರುವುದು ಸ್ವಾಗತಾರ್ಹವಾದುದು. ಈ ವಿಧೇಯಕವನ್ನು ಮುಂದಿನ ಮಾಡಿದ್ದಕ್ಕೆ ರಾಜ್ಯದ ಜನರ ಪರವಾಗಿ ಮಾನ್ಯ ಗೃಹ ಸಚಿವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಈ ವಿಧೇಯಕದ ಬಗ್ಗೆ ಎರಡು ಮೂರು ಅಂಶಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ರೀತಿಯ ಭೂಕಬಳಿಸುವವರು ಇರಬಹುದು, ಭೂಗತ ದೊರೆಗಳು ಇರಬಹುದು, ಬೇರೆ ಬೇರೆ ರೀತಿಯ ಮಾಫಿಯಾ, ಕಳ್ಳಸಾಗಾಣಿಕೆದಾರರು ಇರಬಹುದು, ಇವರನ್ನು ಪತೋಟಿಯಲ್ಲಿಡಲು ಯಾವ್ಯಾವ ಇಲಾಖೆಗಳು ಇದೆಯೋ ಅವುಗಳೂ ಸಹ ಪರೋಕ್ಷವಾಗಿ ಇಂಥವರ ಕೈಯಲ್ಲಿ ಇರುವುದನ್ನು ನಾವು ನೋಡುತ್ತಿದ್ದೇವೆ. ಪರೋಕ್ಷವಾಗಿ ಇದಕ್ಕೆ ಯಾರು ಬೆಂಬಲ ಕೊಡುತ್ತಾರೆ, ಅಂಥವರ ಆಸ್ತಿಗಳನ್ನು ಯಾರು ಇಟ್ಟುಕೊಳ್ಳುತ್ತಾರೆ, ಬೇನಾಮಿ ಹೆಸರಿನಲ್ಲಿ ಅವರ ಆಸ್ತಿಗಳು ಇದ್ದರೂ ಅದನ್ನು ಡಿಟೆಕ್ಟ್ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಿ. ಆದರೂ ಇದನ್ನು ಸಮಗ್ರವಾಗಿ ಜಾರಿಗೆ ತರುವಲ್ಲಿ, ತಮ್ಮ ಇಲಾಖೆಯಿಂದ ಹೆಚ್ಚಿನ ಗಮನ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಇದರಲ್ಲಿ, ಒಂದು ಸಂಶಯವನ್ನು ನಾನು ಆಗಲೇ ವ್ಯಕ್ತಮಾಡಿದ್ದೆ. ಅದೇನೆಂದರೆ, ಸೆಲ್ಯುಲರ್ ಫೋನ್, ವೈರ್‌ಲೆಸ್ ಉಪಕರಣಗಳು, ಎಲೆಕ್ಟ್ರಾನಿಕ್ಸ್ ಉಪಕರಣಗಳು, ಮುಂತಾದವುಗಳ ಮಾಹಿತಿಯನ್ನು ತಡೆದು ಪ್ರತ್ಯೇಕಿಸುವುದು ಮತ್ತು ಅದನ್ನು ಬಹಿರಂಗಪಡಿಸುವುದಕ್ಕೆ ನಿಷೇದವನ್ನು ವ್ಯಕ್ತಪಡಿಸಿದಂಥ ಸಂದರ್ಭದಲ್ಲಿ, ಮಾಡಿದಂಥ ಕಾನೂನಿನ ಚೌಕಟ್ಟು ಮುಂತಾದ ಬಗ್ಗೆ ವಿಧೇಯಕದ ಕ್ಲಾಜ್ 15, 16, 17 ರಲ್ಲಿ, ಇದೆ. ಪ್ರಾಪ್ಟಿಕಲಿ ಇದು ಒಳ್ಳೆಯ ಅಂಶ. ಇದರ ಜೊತೆಗೆ ಇದರ ದುರುಪಯೋಗವಾಗದಂತೆ ತಡೆಯುವ ಪ್ರಯತ್ನ ನಮ್ಮಿಂದ ಆಗಬೇಕು. ಖಂಡಿತವಾಗಿ ನಾವು ಇದರ ವಿರೋಧವಲ್ಲ, ನಾವು ಇದರ ಪರವಾಗಿಯೇ ಇದ್ದೇವೆ. ಆದರೆ ಹಲವಾರು ಸಂದರ್ಭಗಳಲ್ಲಿ ಇದನ್ನು ಬೇರೆಯದಕ್ಕೆ ಉಪಯೋಗ ಮಾಡಲು ಸಾಧ್ಯವಿರುವ ಸಂಶಯವಿದೆ. ಆದ್ದರಿಂದ ಇದನ್ನು ಜಾರಿಗೆ ತರುವಂಥ ಸಂದರ್ಭದಲ್ಲಿ, ಇದರ ಬಗ್ಗೆ ಸಮಗ್ರವಾದ ಚಿಂತನೆ ಆಗಬೇಕಾಗುತ್ತದೆ. ಪೋಲೀಸ್ ಅಧಿಕಾರಿಗಳ ಮುಂದೆ ಮಾಡಿಕೊಳ್ಳುವ

ತಪ್ಪು ಒಪ್ಪಿಗೆಯ ಬಗ್ಗೆ ಪರಿಗಣನೆಗೆ ತಗಾಗುವುದೆಂದು ಕ್ಲಾಸ್ 19ರಲ್ಲಿ ಹೇಳಿದ್ದೀರಿ. ಬಹುಶಃ ಇದು ನಮ್ಮ ಎವಿಡೆನ್ಸ್ ಆಕ್ಟ್ ಐ.ಪಿ.ಸಿ.ಸಿ. ಆಕ್ಟ್‌ಗಳಿಗೆ ವಿರೋಧವಾಗಬಹುದೇನೋ ಎಂಬ ಬಗ್ಗೆ ಕ್ಲಾರಿಫಿಕೇಷನ್ ಮಾಡುವ ಅವಶ್ಯಕತೆ ಇದೆ. ಸಂಹಿತೆಯಲ್ಲಿ, ಅಥವಾ ಭಾರತ ಸಾಕ್ಷ್ಯ ಅಧಿನಿಯಮ, 1872ರಲ್ಲಿ ಏನೇ ಇದ್ದರೂ ಈ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಪೋಲೀಸ್ ಸೂಪರಿಂಟೆಂಡೆಂಟ್ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಒಬ್ಬ ಪೋಲೀಸ್ ಅಧಿಕಾರಿಯ ಮುಂದೆ ಒಬ್ಬ ವ್ಯಕ್ತಿಯು ಮಾಡಿರುವ ಮತ್ತು ಅಂಥ ಪೋಲೀಸ್ ಅಧಿಕಾರಿಯು ಲಿಖಿತದಲ್ಲಿ ಅಥವಾ ಶಬ್ದಗಳು ಅಥವಾ ಪ್ರತಿರೂಪಗಳನ್ನು ಪುನರುತ್ಪಾದಿಸಬಹುದಾದ ಟ್ಯಾಪೆಗಳು, ಟೇಪುಗಳು ಅಥವಾ ಧ್ವನಿಸುರಳಿಗಳಂಥ ಯಾವುದೇ ಯಾಂತ್ರಿಕ ಸಾಧನಗಳಲ್ಲಿ ಮೇಲೆ ಅಭಿಲೇಖಿಸಿರುವ, ಒಂದು ತಪ್ಪೊಪ್ಪಿಗೆಯನ್ನು ಅಂಥ ವ್ಯಕ್ತಿಯು ಅಥವಾ ಸಹ ಆಪಾದಿತನ, ದುಷ್ಪೇರಕ ಅಥವಾ ಪಿತೂರಿಗಾರನ ವಿಚಾರಣೆಯಲ್ಲಿ, ಅನುಮತಿಸಬಹುದು "ಪರಂತು, ಸಹ ಆಪಾದಿತ, ದುಷ್ಪೇರಕ ಅಥವಾ ಪಿತೂರಿಗಾರನನ್ನು, ಆಪಾದಿತನೊಂದಿಗೆ ಅದೇ ಮೊಕದ್ದಮೆಯಲ್ಲಿ ಆಪಾದಿತನನ್ನಾಗಿಸತಕ್ಕದ್ದು ಮತ್ತು ವಿಚಾರಣೆ ನಡೆಸಿರತಕ್ಕದ್ದು" ಈ ರೀತಿ ಮುಂದುವರಿಸಿಕೊಂಡು ಹೇಳಿದ್ದೀರಿ. ಬಹುಶಃ ನಮ್ಮ ಎವಿಡೆನ್ಸ್ ಆಕ್ಟ್, ಸಿ.ಆರ್.ಪಿ.ಸಿ. ಇದರ ಪ್ರಾವಿಜನ್‌ಗೆ ಭಾದಕವಾಗಬಹುದೋ ಎಂಬ ಬಗ್ಗೆ ನೋಡಬೇಕಾಗುತ್ತದೆ. ಏಕೆಂದರೆ ಒಬ್ಬ ಪೋಲೀಸ್ ಅಧಿಕಾರಿಯ ಮುಂದೆ ತಪ್ಪೊಪ್ಪಿಗೆ ಮಾಡಿದರೆ ಕ್ರಿಮಿನಲ್ ಪ್ರೊಸೀಜರ್ ಕೋರ್ಟ್‌ನಲ್ಲಿ, ಇತರೆಡೆಗಳಲ್ಲಿ ಕೋರ್ಟ್ ಆಫ್ ಲಾದಲ್ಲಿ ಮಂಡನೆ ಮಾಡಲು ಸಾಧ್ಯವಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆ. ಇದರ ಬಗ್ಗೆ ಪೂರ್ತಿ ಮಾಹಿತಿಯನ್ನು ಕೊಡಲು ಈಗ ನನ್ನಿಂದ ಸಾಧ್ಯವಾಗುತ್ತಿಲ್ಲ, ಅದ್ದರಿಂದ ಇದರ ಬಗ್ಗೆ ಪರಿಶೀಲನೆ ಮಾಡಬೇಕು. ಅನಂತರ ಕ್ಲಾಸ್ 20ರಲ್ಲಿ ಸಾಕ್ಷಿದಾರನ ಸಂರಕ್ಷಣೆ ಬಗ್ಗೆ ಹೇಳಿದ್ದೀರಿ. ಇದು ಬಹಳ ಒಳ್ಳೆಯದು. ಏಕೆಂದರೆ, ಇವತ್ತು ಈ ಮಾಫಿಯಗಳ ವಿರುದ್ಧ ಯಾವುದೇ ಸಾಕ್ಷಿದಾರರು ಸಾಕ್ಷಿಯನ್ನು ಹೇಳಲು ಹೋಗುತ್ತಿಲ್ಲ. ಅವರ ವಿರುದ್ಧ ದೂರು ಕೊಡಲು ಎಲ್ಲರೂ ಹಿಂದೇಟು ಹಾಕುತ್ತಾರೆ. ಏಕೆಂದರೆ, ಇವತ್ತು ದೂರು ಕೊಟ್ಟರೆ ನಾಳೆ ಅವನ ವಿರುದ್ಧವೇ ಮಾಫಿಯಾಗಳು ಕ್ರಮ ತೆಗೆದುಕೊಳ್ಳುವುದನ್ನು ನೋಡುತ್ತಿದ್ದೇವೆ. ಅದ್ದರಿಂದ ಸಾಕ್ಷಿಯನ್ನು ಹೇಳುವವರಿಗೆ ಹೆಚ್ಚಿನ ರಕ್ಷಣೆಯನ್ನು ಕೊಡಬೇಕಾದ ಅವಶ್ಯಕತೆ ಇದೆ. ತಾವು ಸಾಕ್ಷಿಗಳ ರಕ್ಷಣೆಗೆ ಏನೇನು ಕ್ರಮ ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ತಿಳಿಸಿದ್ದೀರಿ. ಅದರೆ ಇದೂ ಸಹ ಸಾಕಷ್ಟು ಜಾಗ್ರತೆಯಾಗಿ ಜಾರಿಗೆ ತರಬೇಕು. ತಾವೇನು ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ, ವಿಧೇಯಕ ವನ್ನು ಇಲ್ಲಿ ಮಂಡಿಸಿದ್ದೀರಿ ಅದನ್ನು ನಾನು ಸ್ವಾಗತಿಸುತ್ತಿದ್ದೇನೆ.

+ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) :— ಮಾನ್ಯ ಅಧ್ಯಕ್ಷರೆ, ಇಂದು ಏನು 'ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ, ವಿಧೇಯಕ' ವನ್ನು ತಂದಿದ್ದಾರೆ ಇದನ್ನು ಕೆಲವು ವರ್ಷಗಳ ಮೊದಲೇ ತರಬೇಕಾಗಿತ್ತು. ಇವತ್ತೇನು ಭಾರಿ ಪ್ರಮಾಣದಲ್ಲಿ

ಅಪರಾಧಗಳು ನಡೆಯುತ್ತಿದೆ ಅದರ ಹಿನ್ನೆಲೆಯಲ್ಲಿ ಇದನ್ನೇನು ತಂದಿದ್ದಾರೆ ಅದಕ್ಕಾಗಿ ಸರ್ಕಾರವನ್ನು ಅಭಿನಂದಿಸುತ್ತೇನೆ. ಈ ವ್ಯವಸ್ಥಿತ ಅಪರಾಧಕ್ಕೆ ಕಾರಣ ಅವರಷ್ಟು ವ್ಯವಸ್ಥಿತವಾಗಿ ಪೋಲೀಸ್‌ನವರು ವ್ಯವಸ್ಥೆ ಮಾಡದಿರುವುದು. Lack of organisation in the Police Department in the security services is helping these organised criminals. There is un holy alliance between soem elements in the Police Department and the organised cirminals aided or abetted by the poeple in power. ಅದು ಇವತ್ತು ಭಾರಿ ಅಪಾಯಕಾರಿ ಮಟ್ಟಕ್ಕೆ ಮುಟ್ಟುತ್ತಿದೆ. ಮುಂಬೈಯಲ್ಲಾದ ಸರಣಿ ಬಾಂಬ್ ಸ್ಫೋಟದ ಬಗ್ಗೆ ನಾವು ತಿಳಿದಿದ್ದೇವೆ. ಸಾಲ್ಕು ಗಂಟೆಗಳ ಅವಧಿಯಲ್ಲಿ ಹಲವಾರು ಕಟ್ಟಡಗಳಿಗೆ ಒಂದೇ ಸಲ ಬಾಂಬನ್ನು ಇಟ್ಟು ಇಡೀ ದೇಶವೇ ನಡುಗುವಂಥ ಪರಿಸ್ಥಿತಿಯನ್ನು ಅವರುಗಳು ಉಂಟು ಮಾಡಿದ್ದರು. ನಮ್ಮ ರಾಜ್ಯದಲ್ಲೂ ಕಳೆದ ಎರಡು ತಿಂಗಳ ಹಿಂದೆ ಯಾರಿಗೂ ಗೊತ್ತಾಗದಿರುವಂತೆ ಚರ್ಚ್‌ಗಳಲ್ಲಿ ಬಾಂಬ್ ಸ್ಫೋಟವಾಯಿತು. ನಾವು ಬಾಡಿಗೆ ಮನೆಯೊಂದನ್ನು ಹುಡುಕಿದೆವು. ಆಗ ಮಾನ್ಯ ಸುಬ್ಬಾರೆಡ್ಡಿಯವರು ಮಾತನಾಡುತ್ತ ಅದೊಂದು ವ್ಯವಸ್ಥಿತ ರಾಕೆಟ್ ಇದೆ, ಅವರಿಗೆ ಹಣವನ್ನು ಕೊಟ್ಟರೆ ಮಾಲೀಕರ ಪರವಾಗಿಯೂ ವರ್ತಿಸುತ್ತಾರೆ ಅಥವಾ ಬಾಡಿಗೆದಾರನನ್ನು ಹೊರಕ್ಕೆ ಕಳಿಸಿಯೂ ಕೊಡುತ್ತಾರೆಂದು ಹೇಳಿದರು. ಈ ರೀತಿ ವ್ಯವಸ್ಥಿತ ಅಪರಾಧಿಗಳೇನಿದ್ದಾರೆ ಅವರ ಬಗ್ಗೆ ಸಮಾಜದಲ್ಲಿ ಯಾರೂ ಕನಿಕರವನ್ನು ತೋರಿಸಬಾರದು, ಸಹಾಯ ಮಾಡಬಾರದು. ಕೊನೆಯಪಕ್ಷ ರಾಜಕೀಯ ಪಕ್ಷಗಳಲ್ಲಿ ಕಾಮನ್ ಮಿನಿಮಂ ಅಂಡರ್‌ಸ್ಟ್ಯಾಂಡಿಂಗ್‌ಗೆ ಬರಬೇಕಾಗುತ್ತದೆ. ಈ ರೀತಿ ದೇಶದ್ರೋಹಿ, ಸಮಾಜದ್ರೋಹಿ ಕೆಲಸಗಳಲ್ಲಿ ಯಾರ್ಯಾರು ತೊಡಗುತ್ತಾರೆ ಅವರಿಗೆ ಯಾವುದೇ ರೀತಿಯ ಸಹಕಾರ, ರಕ್ಷಣೆ ಕೊಡುವುದಿಲ್ಲವೆಂಬ ಸಿದ್ಧಾಂತಕ್ಕೆ ನಾವು ಬರಬೇಕಾಗುತ್ತದೆ. ಇವರು ವ್ಯವಸ್ಥಿತ ಅಪರಾಧವು ಯಾವುದೇ ರಾಜ್ಯಕ್ಕೆ ಸೀಮಿತವಾಗಿಲ್ಲವೆಂದು ಹೇಳಿದ್ದಾರೆ. ನಾವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಇದು ಯಾವುದೇ ಜಾತಿ, ವರ್ಗ, ಧರ್ಮಕ್ಕೆ ಸೀಮಿತವಾಗಿಲ್ಲವೆಂದು ಹೇಳಬಹುದು. ಇದು ಎಲ್ಲಾ ಕಡೆಗಳಲ್ಲೂ ಹರಡಿಬಿಟ್ಟಿದೆ. ನಮ್ಮ ಕರಾವಳಿ ಪ್ರದೇಶಗಳಲ್ಲಿ ಬೇರೆ ಬೇರೆ ರಾಷ್ಟ್ರಗಳಿಂದ ಕಳ್ಳಸಾಗಾಣಿಕೆ, ಬೇರೆ ಬೇರೆ ಏನೇನಾಗುತ್ತಿದೆ ವಿಶೇಷವಾಗಿ ಹೆಣ್ಣುಮಕ್ಕಳನ್ನು ಅಪಹರಿಸುವ ವ್ಯವಸ್ಥಿತ ಜಾಲವಿರಬಹುದು, ಅದನ್ನು ನೆನಪಿಸಿಕೊಂಡರೆ ನನಗೆ ಬಹಳ ದುಃಖವಾಗುತ್ತದೆ. ಈ ದೃಷ್ಟಿಯಿಂದ ಇವರೇನು ವಿಧೇಯಕವನ್ನು ತಂದಿದ್ದಾರೆ ಅದನ್ನು ನಾವುಗಳು ಸದುಪಯೋಗಪಡಿಸಿಕೊಂಡು ಇವರುಗಳನ್ನೆಲ್ಲ ಬಗ್ಗುಬಡಿಯಲು ಉಪಯೋಗಿಸಬೇಕು. ವ್ಯವಸ್ಥಿತ ಅಪರಾಧಿಗಳನ್ನು ಹಿಡಿಯುವುದು ಒಂದು ಭಾಗ. ಈ ವ್ಯವಸ್ಥಿತ ಅಪರಾಧಿಗಳಿಗೆ ಫ್ರೀಡಿಂಗ್ ಕೇಂದ್ರಗಳು ಇದೆ, ಅದನ್ನೂ ಸಹ ನಾವು ನಾಶ ಮಾಡಬೇಕಾಗಿರುವುದು ಮತ್ತೊಂದು ಭಾಗವಾಗಿದೆ. ಅದು ಬೆಂಗಳೂರಿನಲ್ಲಿರುವ ಲೈವ್‌ಬ್ಯಾಂಡ್‌ಗಳಿರಬಹುದು, ಹೊರವಲಯಗಳಲ್ಲಿರುವ ಫ್ಲಾಟ್‌ಗಳಿರಬಹುದು, ಇವುಗಳೇ ಆ

ಬ್ರೀಡಿಂಗ್‌ನ ಕೇಂದ್ರಗಳಾಗಿವೆ. ಇಲ್ಲಿ ಏನು ಬೇಕಾದರೂ ಮಾಡಬಹುದು, ಯಾರನ್ನು ಬೇಕಾದರೂ ಮುಟ್ಟಿಯಲ್ಲಿಟ್ಟುಕೊಳ್ಳಬಹುದು, ಈ ರೀತಿ ನಡೆಯುತ್ತಿದೆ. ಇನ್ನು ಒಂದು ಹಂತಕ್ಕೆ ಹೋಗಿ ಅವರು, ತಾವು ಹೇಳಿದ ಹಾಗೆ ಸಮಾಜ ನಡೆಯಬೇಕು ಎನ್ನುವಂತಹ ನಿಲುವಿಗೆ ಬಂದುಬಿಟ್ಟಿದ್ದಾರೆ. ಇನ್ನು ಮುಂದೆ ನನಗೆ ಅನ್ನಿಸುತ್ತದೆ, ಸಮಾಜ ಜಾಸ್ತಿ ಹೈಟೆಕ್ ಆದಾಗ ನಮ್ಮ ಐ.ಟಿ ಆದ ರೀತಿಯಲ್ಲಿ ಕ್ರೈಮ್ ಕೂಡ ಇವತ್ತು ಹೈಟೆಕ್ ಆಗುವ ಪರಿಸ್ಥಿತಿ ಇದೆ. ಮುಂದೆ ಸೈಬರ್ ಅಫೆನ್ಸಸ್ ಕೂಡ ಆಗುತ್ತದೆ. ಅದಕ್ಕೇ ಒಂದು ಜಾಲವಾಗುತ್ತದೆ. ಅದನ್ನು ಕೂಡ ನಮ್ಮ ಸರ್ಕಾರ, ನಮ್ಮ ಗೃಹ ಇಲಾಖೆ ಸ್ವಲ್ಪ ಮುಂದಕ್ಕೆ ಲಾಂಗ್ ರೇಂಜ್‌ನಲ್ಲಿ ಯೋಚನೆ ಮಾಡಿ, ಮುಂದೆ ಏನಾಗಬೇಕು ಎಂದು ತಿಳಿದುಕೊಂಡು ಕೆಲಸ ಮಾಡಬೇಕು. ಈಗಾಗಲೇ ಮಾನ್ಯ ಸದಾನಂದ ಗೌಡರು ಸೆಕ್ಷನ್ 5 ಮತ್ತು ಸೆಕ್ಷನ್ 19ರ ಪ್ರಕಾರ ಹೇಳಿದ್ದಾರೆ. ಸೆಕ್ಷನ್ ಐದರಲ್ಲಿ ವಿಶೇಷ ನ್ಯಾಯಾಲಯಗಳ ಬಗ್ಗೆ ತಾವು ಹೇಳಿದ್ದೀರಿ. ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುತ್ತೇವೆಂದು ತಾವು ಹೇಳಿದ್ದೀರಿ. ಈಗಾಗಲೇ ಮಹಾರಾಷ್ಟ್ರ ಸಚಿವರ ಒಂದು ಉದಾಹರಣೆಯನ್ನು ಕೊಟ್ಟು ಅವರು ಅಲ್ಲಿ ಐದು ತಿಂಗಳಲ್ಲಿ ಶಿಕ್ಷೆ ಕೊಟ್ಟರು ಎಂದು ಹೇಳಿದರು. ನಾವು ಸ್ವೀಡೀ ಜಸ್ಟೀಸ್ ಎಂದರೆ ಬೇಗ ಬೇಗ ಅಪರಾಧಿಗಳಿಗೆ ಅವರ ವಿಚಾರಣೆ ನಡೆದು ಅವರಿಗೆ ಶಿಕ್ಷೆ ವಿಧಿಸಿದೆ ಇದ್ದರೆ ಮತ್ತೆ ಅವರು ಯಾರಾನ್ನಾದರೂ ಕಿಡ್‌ನ್ಯಾಪ್ ಮಾಡುತ್ತಾರೆ, ಅವರನ್ನು ಬಿಡದೆ ಇದ್ದರೆ ನಾವು ಇವರನ್ನು ಬಿಡುವುದಿಲ್ಲವೆಂದು ಹೇಳುತ್ತಾರೆ. ನಾವು ಸ್ವೀಡೀ ಟ್ರಯಲ್ ಮಾಡದೇ ಇದ್ದರೆ ಸ್ಪೆಷಲ್ ಕೋರ್ಟ್ ಇರಲಿ, ಯಾವುದೇ ಇರಲಿ, ಸ್ವೀಡೀ ಟ್ರಯಲ್ಲಿಗೆ ಗಮನ ಕೊಟ್ಟು ಇವರೆಲ್ಲರನ್ನು ಕೂಡ ಕಠಿಣ ಶಿಕ್ಷೆಗೆ ಗುರಿ ಮಾಡಬೇಕು. ನಾವು ಯಾವುದೇ ರೀತಿಯ ಅಡ್ವರ್ಸ್‌ಮೆಂಟ್‌ಗೆ ಅವಕಾಶ ಕೊಡಬಾರದು. ಅದರ ಜೊತೆಗೆ ಸೆಕ್ಷನ್ 19ರಲ್ಲಿ ತಾವು ಪೋಲೀಸ್ ಅಧಿಕಾರಿಗಳ ಮುಂದೆ ಮಾಡಿದ ಕೆಲವು ತಪ್ಪೊಪ್ಪಿಗೆಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು. ಅದು ಬಹಳ ಒಳ್ಳೆಯದು. ಕನ್‌ಫೆಷನ್ ಸ್ಟೇಟ್‌ಮೆಂಟ್, ತಾವು ಇಂಡಿಯನ್ ಎವಿಡೆನ್ಸ್ ಆಕ್ಟ್ ಬಗ್ಗೆ ಕೂಡ ಹೇಳಿದ್ದೀರಿ ಆದರೆ ನಮಗೆ ಇದು ಇರುವುದು ಎಲ್ಲಾದರೂ ದುರುಪಯೋಗ ಆಗುವುದಿಲ್ಲವೆ? ಈ ಕನ್‌ಫೆಷನ್ ಸ್ಟೇಟ್‌ಮೆಂಟ್ ಹೆಸರಿನಲ್ಲಿ ಕನ್‌ಫೆಷನ್ ಮಾಡಿಸಿಕೊಂಡು ಯಾರಾದರೂ ನಿರಾಪರಾಧಿಗಳನ್ನು ಇದರಲ್ಲಿ ಸಿಲುಕಿಸುವಂತಹ ಕೆಲಸ ಆಗುವುದಿಲ್ಲವೇ? ಆಗುವ ಚಾನ್ಸ್ ಇಲ್ಲವೇ? ಇದು ಡ್ರಾಪ್ ಆಗಿದೆ. ಇದು ಒಂದು ಹೊಸದು ಬಂದಿದೆ. ಹೋದೆಯಾ ಪಿಶಾಚಿ ಎಂದರೆ ಬಂದೆಯಾ ಗವಾಕ್ಷಿಯೊಳಗೆ ಎನ್ನುವ ಹಾಗೆ ಆಗಿದೆ. ಈ ಬಗ್ಗೆ ನನ್ನ ಒಂದು ಕಳಕಳಿ ಏನೆಂದರೆ ಯಾವುದೇ ಒಂದು ಕಾರಣದಿಂದ ಈ ಸೆಕ್ಷನ್ 19 ದುರುಪಯೋಗವಾಗದೆ ಇರುವ ಹಾಗೆ ಆಗಬೇಕು. ನಮಗೆಲ್ಲ ಗೊತ್ತಿರುವಂತೆ ಪೋಲೀಸರು ಅಪರಾಧಿಗಳ ಬಾಯಿ ಬಿಡಿಸುವುದಕ್ಕೆ ಅವರದೇ ಆದ ಅನೇಕ ವಿಧಾನಗಳನ್ನು ಇಟ್ಟುಕೊಂಡಿದ್ದಾರೆ. ಆ ವಿಧಾನಗಳನ್ನು ಇಟ್ಟುಕೊಂಡಿರುವಾಗ ನಾವು ಮಾಡಿರದೆ ಇರುವ ತಪ್ಪುಗಳು ಕೂಡ ಬಾಯಿಯಿಂದ ಆಚೆ ಬರಬಹುದು. ಅದು ನಮ್ಮ ಅನುಭವ. ಹಿಂದೆ ಏನೇನಾಗಿದೆ ಎನ್ನುವುದನ್ನೆಲ್ಲಾ ಎಚ್ಚರಿಕೆಯಾಗಿ ಇಟ್ಟುಕೊಂಡು

ಸಾಕ್ಷಿದಾರನ ಸಂರಕ್ಷಣೆ ಮಾಡತಕ್ಕಂಥಾದ್ದು ಬಹಳ ಮುಖ್ಯ. ಮಾನ್ಯ ಅಧ್ಯಕ್ಷರೆ, ನಾನು ಒಂದು ಸಲ ಕೋರ್ಟ್‌ನಲ್ಲಿ ಕುಳಿತುಕೊಂಡಿದ್ದೆ. ಆಗ ಒಬ್ಬರು ಪಬ್ಲಿಕ್ ಪ್ರಾಸಿಕ್ಯೂಟರ್ ಜಡ್ಜ್ ಮುಂದೆ ಬಂದು ನಿಂತುಕೊಂಡರು. ಇವರ ಕೇಸ್ ಕರೆದ ತಕ್ಷಣ ಅವರು ತಲೆಯನ್ನು ತಗ್ಗಿಸಿಬಿಟ್ಟು ಬಹಳ ತಗ್ಗಿದ ಧ್ವನಿಯಲ್ಲಿ, "Sir, all the 12 witnesses have become hostile." ಎಂದಾಗ ಆ ಜಡ್ಜ್ ಬಹಳ ಚೆನ್ನಾಗಿ ಹೇಳಿದರು;" I am happy the Public Prosecutor has not become hostile' ಎಂದು. ಸಾಕ್ಷಿಗಳಿಗೆ ನಾವು ಎಲ್ಲಿಯವರೆಗೆ ರಕ್ಷಣೆ ಒದಗಿಸುವುದಿಲ್ಲವೋ ಆಗ ಅವರಿಗೆ ಅನ್ನಿಸಬೇಕು. 'ಇಲ್ಲ, ಇದು ಪೊಲೀಸ್ ಕ್ರಿಮಿನಲ್ಸ್‌ಗಿಂತ ಸ್ಟ್ರಾಂಗ್ ಇದ್ದಾರೆ. ನನ್ನ ರಕ್ಷಣೆಗೆ ಬರುತ್ತಾರೆ' ಎಂದು ಅನ್ನಿಸಬೇಕು ಇದ್ದರೆ they will become hostile and all these things will become force. ಈ ಒಂದು ಕೆಲವು ಅಂಶಗಳನ್ನು ಗಮನದಲ್ಲಿಟ್ಟುಕೊಂಡರೆ ಈ ಅಪವಿತ್ರ, ಮೈತ್ರಿಕೂಟ ಏನಿದೆ, ಏನು ಆರ್ಗನೈಸ್ಡ್ ಕ್ರಿಮಿನಲ್ಸ್‌ಗೆ ಮತ್ತು ಯಾರು ನಮಗೆ ರಕ್ಷಣೆ ಮಾಡಬೇಕು. ಆ ಪೊಲೀಸ್ ಇಲಾಖೆಯ ಕೆಲವು ಅಧಿಕಾರಿಗಳು ಮತ್ತು ರಾಜಕೀಯ ವ್ಯಕ್ತಿಗಳು ಸಪೋರ್ಟ್ ಮಾಡುತ್ತಾರೆ, ಅವರಿಗೆ ಈ ಒಂದು ಅಪವಿತ್ರ ಮೈತ್ರಿಕೂಟ ಮುರಿದು ಈ ಒಂದು ಆಕ್ಟ್ ಏನು ತಂದಿದ್ದಾರೆ, ಇದರಿಂದ ನಮ್ಮ ಸಮಾಜಕ್ಕೆ ಈ ವ್ಯವಸ್ಥಿತ ಅಪರಾಧಗಳಿಂದ ಮುಕ್ತವಾಗಬೇಕು. ಅಪರಾಧಿಗಳನ್ನು ಶಿಕ್ಷೆಗೆ ಗುರಿ ಮಾಡುವುದಕ್ಕೆ ಸಮಾಜದಲ್ಲಿ ಒಂದು ನೆಮ್ಮದಿ ಉಂಟು ಮಾಡುವುದಕ್ಕೆ ಈ ಒಂದು ವಿಧೇಯಕ ಸಹಾಯಕವಾಗಲಿದೆ ಎಂದು ಹೇಳಿ, ಇದು ತಡವಾದರೂ ಕೂಡ ನಮ್ಮ ರಾಜ್ಯದಲ್ಲಿ ಈ ಅಪರಾಧವನ್ನು ನಿಯಂತ್ರಣ ಮಾಡುವುದಕ್ಕೆ ಆ ಇಚ್ಛಾಶಕ್ತಿ ವ್ಯಕ್ತ ಮಾಡಿರುವುದಕ್ಕೆ ನಾನು ಸರ್ಕಾರವನ್ನು ಹಾಗೂ ಮಾನ್ಯ ಸಚಿವರಾದ ಮಲ್ಲಿಕಾರ್ಜುನ ಖರ್ಗೆಯವರನ್ನು ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :— ಮಾನ್ಯ ಅಧ್ಯಕ್ಷರೆ, ನನ್ನ ಸಹೋದ್ಯೋಗಿ ಮಿತ್ರರಾದ ಮಾನ್ಯ ಸುರೇಶ್‌ಕುಮಾರ್ ಅವರು, ಮಾನ್ಯ ಸದಾನಂದಗೌಡರು ಹಾಗೂ ಅವರ ಜೊತೆಯಲ್ಲಿ ನಾನೂ ಸಹ ವಿಶೇಷವಾಗಿ ರಾಜ್ಯದಲ್ಲಿ ಅಪರಾಧಿಗಳ ನಿಯಂತ್ರಣವನ್ನು ಮಾಡುವ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು, ಅದರಲ್ಲೂ ವಿಶೇಷವಾಗಿ ಮಾನ್ಯ ಗೃಹ ಮಂತ್ರಿಯವರು ಈ 'ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ ವಿಧೇಯಕ 2000' ಅನ್ನು ಈ ಒಂದು ಅಧಿವೇಶನದಲ್ಲಿ ಮಂಡನೆ ಮಾಡಿರುವುದಕ್ಕೆ ನಾನು ತೃಪ್ತಿಯನ್ನು ವ್ಯಕ್ತ ಮಾಡುತ್ತೇನೆ. ಕಾರಣ, ವಸ್ತುಸ್ಥಿತಿಯಲ್ಲಿ ನಮ್ಮ ಸಮಾಜದ ಅಪರಾಧಿಗಳಿಗೆ ಅನೇಕ ಕಾರಣಗಳಿವೆ. ಕೇವಲ ಹಣವನ್ನು ಗಳಿಸುವ ದೃಷ್ಟಿಯಿಂದ ಅಪರಾಧ ಮಾಡುತ್ತಾರೆಂದು ಹೇಳುವ್ಯದಕ್ಕಾಗುವುದಿಲ್ಲ. ನಮ್ಮ ಸಾಮಾಜಿಕ ವ್ಯವಸ್ಥೆ ಆರ್ಥಿಕ ವ್ಯವಸ್ಥೆ ನಮ್ಮ ನಿರುದ್ಯೋಗ ಸಮಸ್ಯೆಗಳು ಮತ್ತು ಜಾತಿವಾದ ಬೇರು ಬಿಟ್ಟಿರುವ ಈ ಸಮಾಜದಲ್ಲಿ ಅಪರಾಧಗಳು ಹೆಚ್ಚುತ್ತಿರುವುದು ವಸ್ತುಸ್ಥಿತಿಯಾಗಿದೆ. ಈ ಬಗ್ಗೆ ನಾನು ಏನಾದರೂ ಗೃಹ ಮಂತ್ರಿಗಳಿಗೆ

ಹೇಳಿದರೆ ಅವರು ಒಂದು ಚಾರ್ಟ್ ಮೂಲಕ ನನಗೆ ಹೇಳುತ್ತಾರೆ, ಎಲ್ಲಾ ನಿಯಂತ್ರಣದಲ್ಲಿದೆ, ಎಲ್ಲಾ ಕ್ರೈಮ್ಸ್ ಕಡಿಮೆಯಾಗುತ್ತಿದೆಯೆಂದು ಹೇಳುತ್ತಾರೆ. ಆದರೆ ವಸ್ತುಸ್ಥಿತಿಯಲ್ಲಿ ಇದು ಇಲ್ಲ, ಇದನ್ನು ನಾವು ಒಪ್ಪಬೇಕಾಗುತ್ತದೆ. ನಾನು ಗೃಹಮಂತ್ರಿಯಾಗಿದ್ದಾಗಲೂ ಕೂಡ ಏನು ನಡೆಯುತ್ತಿತ್ತು, ಇವತ್ತು ಏನು ನಡೆಯುತ್ತಿದೆ, ಇದನ್ನು ನೋಡಿದಾಗ ಅಂತಹ ದೊಡ್ಡ ಬದಲಾವಣೆಯಾಗಿಲ್ಲವೆಂದು ಹೇಳಬೇಕಾಗುತ್ತದೆ. ಆದರೆ ಮಾನ್ಯ ಖರ್ಗೆಯವರನ್ನು ನಾನು ವಿಶೇಷವಾಗಿ ಅಭಿನಂದಿಸುತ್ತೇನೆ. ಕಾರಣ ಬಹಳಷ್ಟು ಜನ ಸದಸ್ಯರುಗಳಿಗೆ ಬಹುಶಃ ಈ ಒಂದು ವಿಧೇಯಕದ ಕಾನ್ಸ್ಟ್ರಿನ್ಸ್ ಮತ್ತು ಈ ವಿಧೇಯಕವನ್ನು ಓದುವುದಕ್ಕೆ ಸಮಯ ಸಿಕ್ಕಿಲ್ಲ. ಈ ವಿಧೇಯಕದ ಮೂಲಕ ನಾವು ತಪ್ಪು ಮಾಡತಕ್ಕಂಥವನಿಗೆ ಮರಣದಂಡನೆಯನ್ನು ಕೊಡತಕ್ಕಂಥ ಅವಕಾಶ ಕೂಡ ಇದರಲ್ಲಿ ಇದೆ. ಇದರ ಅವಶ್ಯಕತೆ ಕೂಡ ಇತ್ತು. ಮತ್ತು ಇದಕ್ಕೆ ಕನಿಷ್ಟ ಶಿಕ್ಷೆಯನ್ನು ಕೊಡುವುದಕ್ಕೆ ಕೂಡ ಅವಕಾಶ ಮಾಡಿಕೊಟ್ಟಿದ್ದಾರೆ. ವಿಶೇಷವಾಗಿ ಈ ಮಾಫಿಯಾ ರೌಡಿಗಳು, ಆರ್ಗನೈಸ್ಡ್ ಗ್ಯಾಂಗ್ಸ್ ಏನಿವೆ ಇವರು ಕೆಲಸ ಮಾಡುತ್ತಿದ್ದಾರೆ. ನಮ್ಮ ಬೆಂಗಳೂರಿನಲ್ಲಿ ನಾವೆಲ್ಲಾ ಹಿಂದೆ ಬಹಳ ಹೆಸರುಗಳನ್ನು ಕೇಳುತ್ತಿದ್ದೆವು. ಕೊತ್ವಾಲ್ ಜಯರಾಜ್ ಇನ್ನು ಅನೇಕ ಹೆಸರುಗಳು ಇವೆ.

ಶ್ರೀ ಕೆ.ಎಸ್. ಸುಬ್ಬಾರೆಡ್ಡಿ :— ಈಗ ಬದುಕಿರುವವರು ಬಹಳ ಜನ ಇದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಅದು ಮಾನ್ಯ ಸುಬ್ಬಾರೆಡ್ಡಿಯವರಿಗೆ ಗೊತ್ತಿರಬಹುದು, ನನಗೆ ಗೊತ್ತಿಲ್ಲ. ಅವರು ಹೇಳಿದರು, ಸತ್ತಿರುವವರನ್ನು ಮಾತ್ರ ಹೇಳುತ್ತಿದ್ದೀರಿ, ಬದುಕಿರುವವರು ಇದ್ದಾರೆ, ಅವರ ಹೆಸರನ್ನು ಹೇಳಲಿಲ್ಲ ಎಂದು. ಗೊತ್ತಿರುವವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಗೃಹಮಂತ್ರಿಯಾದಾಗ ಏನು ಮಾಡಬೇಕು ಅದನ್ನು ಮಾಡಿದ್ದೇನೆ. ನಾನು ಗೃಹಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಇದರ ವಿಚಾರವನ್ನು ನಾವು ಪ್ರಸ್ತಾಪ ಮಾಡಿದ್ದೆವು. ಅದಕ್ಕೋಸ್ಕರ ನನಗೆ ಬಹಳ ಸಂತೋಷವಾಗಿದೆ. ನಿಮಗೆ ಒಂದು ಆಶ್ಚರ್ಯವಾಗಬಹುದು. ಮಹಾರಾಷ್ಟ್ರದಲ್ಲಿ ಎರಡು ವರ್ಷಗಳಿಂದ ಈ ಕಾನೂನನ್ನು ಲಾಗು ಮಾಡಿದ್ದಾರೆ. ಮುಂಬೈನಲ್ಲಿ ವಿಶೇಷವಾಗಿ ಮಾಫಿಯಾ ಗ್ಯಾಂಗ್‌ಗಳು ಏನು ಕೆಲಸ ಮಾಡುತ್ತಿದ್ದವು ಅದರಲ್ಲಿ ಜೆ.ಡಬ್ಲ್ಯೂ. ಸಿಂಗ್ ಎಂದು ಜಡ್ಜ್ ಇದ್ದರು, ಅವರನ್ನು ಈ ಕಾನೂನು ರೀತಿಯಿಂದಲೇ ಅಲ್ಲಿ ಹಿಡಿಯುವುದಕ್ಕೆ ಆಗಿತ್ತು, ಇಲ್ಲದೇ ಇದ್ದರೆ ಅವರು ಬಹಳ ದೊಡ್ಡ ಮನುಷ್ಯರ ಹಾಗೆ ಇದ್ದುಕೊಂಡು ಈ ಒಂದು ಗ್ಯಾಂಗ್‌ನಲ್ಲಿ ಇರುವುದು ಗೊತ್ತಾಗುತ್ತಾ ಇರುತ್ತಿರಲಿಲ್ಲ. ಎಕ್ಸ್‌ಟಾರ್ಷನ್ ಅಂಡ್ ಕಿಡ್‌ನ್ಯಾಪಿಂಗ್ ಏನಿದೆ ಇದು ಕೇವಲ ಬಡವರ ಜೊತೆ ಸೇರತಕ್ಕಂಥಾದ್ದು ಅಲ್ಲ. ಕನ್ನ ಹಾಕತಕ್ಕಂಥಾದ್ದು, ಜೇಬುಗಳ್ಳರು ಇವರದೆಲ್ಲಾ ದೊಡ್ಡ ದೊಡ್ಡ ಪೋಟೊವನ್ನು ಬಸ್‌ಸ್ಟ್ಯಾಂಡ್, ರೈಲ್ವೇಸ್ಟೇಷನ್ ಹಾಗೂ ಪೋಲೀಸ್ ಸ್ಟೇಷನ್‌ಗಳಲ್ಲಿ ಹಾಕುತ್ತೇವೆ. ಕನ್ನಾ ಹಾಕುವವರು ಹಾಕುತ್ತಾರೆ. ಪೊಲೀಸ್ ಸ್ಟೇಷನ್‌ಗೆ ಹೋದಾಗ ಒಂದು ಊರಿನದು ವಿಲೇಜ್ ಕೇಸ್ ಹಿಸ್ಟರಿ ಎಂದು ಇರುತ್ತದೆ.

ವಿಲೇಜ್ ಕೇಸ್ ಹಿಸ್ಟರಿ ತೆಗೆದು ನೋಡಿದರೆ ಆ ಊರಿನಲ್ಲಿ ಜೇಬುಗಳ್ಳರು ಎಷ್ಟು ಜನ ಇದ್ದಾರೆ, ಕಣ್ಣಾ ಹಾಕುವವರು ಎಷ್ಟು ಜನ ಇದ್ದಾರೆ ಎಂದು ಇರುತ್ತದೆ. ಇನ್ನೊಂದು ಹೆಜ್ಜೆ ಮುಂದೆ ಹೋಗಬೇಕು ಎಂದರೆ ನಿಮಗೆ ಅನುಭವ ಇಲ್ಲ. ನನಗೆ ಅನುಭವ ಇದೆ. ನಾನು ಜೈಲಿನಲ್ಲಿ ಇದ್ದೆ.

ಅಧ್ಯಕ್ಷರು :— ನಾನೂ ಜೈಲಿನಲ್ಲಿ ಇದ್ದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— 1947ರಲ್ಲಿ ತಾವು ಇದ್ದದ್ದು. ನಾನು ಇದ್ದದ್ದು 1975ರಲ್ಲಿ, ಎಂದರೆ 30 ವರ್ಷಗಳ ನಂತರ ಜೈಲಿನಲ್ಲಿ ಇದ್ದೆ.

5.20 ಪಿ.ಎಂ.

ಅಧ್ಯಕ್ಷರು :— ನೀವು, ನಾವು ರಾಜಕೀಯ ಖೈದಿಗಳಾಗಿದ್ದೆವು.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ತಾವೇ ನಾನೂ ಜೈಲಿನಲ್ಲಿದ್ದೆ ಎಂದು ಹೇಳಿದಿರಿ, ತಾವು ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿದ್ದವರು ಎಂದು ಹೇಳಿದೆ. ನಾನೇಕೆ ಜೈಲಿಗೆ ಹೋಗಿದ್ದೆ ಎಂದರೆ, ನನ್ನ, ಮಾನ್ಯ ಮಲ್ಲಿಕಾರ್ಜುನ ಖರ್ಗೆ ಹಾಗೂ ಮಾನ್ಯ ಧರ್ಮಸಿಂಗ್‌ರವರ ವಿಶ್ವಾಸಕ್ಕೆ ಧಕ್ಕೆ ಬರುತ್ತದೆ, ಆದುದರಿಂದ ನಾನು ಹೇಳುವುದಕ್ಕೆ ಹೋಗಲಿಲ್ಲ. ಆ ಜೈಲಿನಲ್ಲಿ ನಮಗೊಂದು ಅನುಭವವಾಯಿತು, 3-4 ತಿಂಗಳಿಗೆ 4-5 ಜನಕ್ಕೆ ಒಬ್ಬ ಸಹಾಯಕನೆಂದು ಕೊಡುತ್ತಿದ್ದರು, ಅವರೆಲ್ಲ ಹ್ಯಾಬಿಚ್ಯುಯಲ್ ಪ್ರಿಸನರ್ಸ್. ಅವರು ಮೂರು ತಿಂಗಳು ಇರುತ್ತಿದ್ದರು, ಆಮೇಲೆ ನಾಪತ್ತೆಯಾಗುತ್ತಿದ್ದರು, ಮತ್ತೆ ಮೂರು ತಿಂಗಳಾದ ಮೇಲೆ ವಾಪಸ್ ಬರುತ್ತಿದ್ದರು. ಏತಕ್ಕೆ ಬಂದೆ ಎಂದು ಕೇಳಿದರೆ, ಏನು ಮಾಡುವುದು ಸ್ವಾಮಿ, ನಮ್ಮ ಸರ್ಕಲ್ ಇನ್‌ಸ್ಪೆಕ್ಟರ್, ನಮ್ಮ ಊರಿನಲ್ಲಿ ಕನ್ನವಾಯಿತಂತೆ ನನ್ನನ್ನೇ ಹಿಡಿದುಕೊಂಡು ಒಳಗೆ ಹಾಕಿದ್ದಾರೆ. ಪತ್ರಿಕೆಯಲ್ಲಿ, ಡಾ: ರಾಜ್‌ಕುಮಾರ್ ಅಪಹರಣ ಪ್ರಾರಂಭವಾದ ತಕ್ಷಣವೇ ಈ ಸಮಾಜಘಾತುಕ ಶಕ್ತಿಗಳನ್ನು ರೌಂಡ್ ಆಫ್ ಮಾಡಿಬಿಟ್ಟಿದ್ದೇವೆಂದು ವರದಿ ಬರುತ್ತದೆ. ಯಾವುದೋ ಒಂದು ಸಂದರ್ಭದಲ್ಲಿ ಅಪರಾಧ ಮಾಡಿದಂತಹವರನ್ನು ಕರೆದುಕೊಂಡು ಹೋಗಿ ಈ ರೀತಿಯ ಸೆರೆಗೆ ಹಾಕುತ್ತಾರೆ. ಅದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಅವರು ಮಾಡುವ ಕ್ರೈಮ್ಸ್ ಎಲ್ಲಾ ನಗಣ್ಯ, now the entire structure of the Police Department is changing. Why I am complimenting the Hon'ble Home Minister is that the vision of the Police Department should totally change, the concept of the policing should totally change. ಈಗ ಕಮ್ಯುನಿಟಿ ಪೋಲೀಸ್ ಎಂಬುದು ಬರುತ್ತಿದೆ, ಅದನ್ನು ಮಾಡುವುದಕ್ಕೆ ನಾವು ಈಗ ಹೋಗಬೇಕಾಗಿದೆ. ಕರ್ನಾಟಕದ ಜನಸಂಖ್ಯೆ

ಸುಮಾರು 5 ಕೋಟಿಗೂ ಹೆಚ್ಚು ಇದೆ, ಪ್ರತಿದಿನ ಹೋಗಿ ಬರುವವರು 50 ಲಕ್ಷ ಜನ, 55 ಸಾವಿರ ಜನ ಪೋಲೀಸ್ ಇದ್ದಾರೆ, ಅದರಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರು 25-30 ಸಾವಿರ ಪೋಲೀಸ್‌ನವರು ಮಾತ್ರ. ಐದೂವರೆ ಕೋಟಿ ಜನರನ್ನು 25 ಸಾವಿರ ಪೋಲೀಸ್‌ನವರು ಹೇಗೆ ನಿಯಂತ್ರಿಸಲಾಗುತ್ತದೆ? ಅದಾಗುವುದಿಲ್ಲ. I would also like to compliment Mr. Dharam Singh, the then Home Minister and Sri. S. Bangarappa, the then Chief Minister, ಈ ಪೋಲೀಸ್ ಇಲಾಖೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡು, ಇದನ್ನು ಬಲಪಡಿಸಲು For the first time in the history of Karnataka, 250 crores was given by Mr. S. Bangarappa when he was the Chief Minister. The Police Department was strenghened. ಪ್ರತಿಯೊಂದು ಕೆಲಸವಾಯಿತು, ಆದಾದ ಮೇಲೆ ಮಾನ್ಯ ಟಿ.ಹೆಚ್. ಪಟೇಲರ ಕಾಲದಲ್ಲಿ ನಡೆಯಿತು, ಆದಾದ ನಂತರ ನಡೆದೇ ಇಲ್ಲ, This is the Department which has been totally neglected. ವಾಹನಗಳನ್ನು ಎಷ್ಟೊಂದು ಬದಲಾಯಿಸುವುದಿದೆ, ನಾನು ಡಾ: ರಾಜ್‌ಕುಮಾರ್ ಅಪಹರಣ ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡುವಾಗ ಹೇಳಿದೆ, ಇವರಿಗೆ ಎಸ್‌ಟಿಎಫ್ ಹಾಗೂ ಪಿಒಎಲ್‌ಗೆ ಹಣ ಕೊಡಲಾಗಿರಲಿಲ್ಲ. This is one Department which has been totally neglected. If the development work has to take place ಅಭಿವೃದ್ಧಿ ಕೆಲಸಗಳಾಗಬೇಕಾದರೆ ಕಾನೂನು ಹಾಗೂ ಸುವ್ಯವಸ್ಥೆಯನ್ನುಕಾಪಾಡಬೇಕು. ಇದನ್ನು ಕಾಪಾಡಲು ಪೋಲೀಸ್ ಇಲಾಖೆಗೆ ಹಣ ಕೊಡಬೇಕಾಗುತ್ತದೆ ಮಾನ್ಯ ಮುಖ್ಯಮಂತ್ರಿಗಳು ಇದುವರೆವಿಗೆ ಕಾಫ್ಟ್‌ವೇರ್‌ಗಳಿಗೆ, ಜಾಹೀರಾತು ಪ್ರಕಟಣೆಗಳಿಗೆ, ಸರ್ಕಾರೇತರ ಚಟುವಟಿಕೆಗಳಿಗೆ ಏನು ಖರ್ಚು ಮಾಡುತ್ತಿದ್ದಾರೆ, ಅದರ ಒಟ್ಟು ಮೊತ್ತದಲ್ಲಿ ಶೇಕಡ 5ರಷ್ಟು ಹಣವನ್ನು ಮಾನ್ಯ ಗೃಹ ಸಚಿವರಿಗೆ ಕೊಟ್ಟಿಲ್ಲ, ಇವರನ್ನು ಕಂಡರೆ ಮಾನ್ಯ ಮುಖ್ಯಮಂತ್ರಿಗಳಿಗೆ ಆಗುವುದಿಲ್ಲವೋ ಏನೋ, ಅದು ನನಗೇನೂ ಅರ್ಥವಾಗಿಲ್ಲ. ಪೋಲೀಸ್ ಇಲಾಖೆಗೆ ಕಾನೂನುಗಳನ್ನು ಮಾಡುವ ಅವಶ್ಯಕತೆ ಇದೆ, ಈ ಕಾನೂನು ಮಾಡುತ್ತಿರುವುದಕ್ಕೆ ನಿಮ್ಮನ್ನು ಅಭಿನಂದಿಸುತ್ತೇನೆ. ಆದರೆ ನಿಜವಾಗಿಯೂ ಪೋಲೀಸ್ ಇಲಾಖೆಗೆ ವಾಹನಗಳ ರಿಪ್ಲೇಸ್‌ಮೆಂಟ್ ಆಗಬೇಕು. ಈ ಸದನದ ಎಲ್ಲಾ ಸದಸ್ಯರಿಗೂ ಗೊತ್ತಿರುವಂತೆ ಗ್ರಾಮೀಣ ಮೀಸಲಾತಿಗೆ ಸಂಬಂಧಿಸಿದಂತೆ ನಮಗೆಲ್ಲಾ ಬಹಳ ಕಮಿಟ್‌ಮೆಂಟ್ ಇದೆ, ಆದರೂ ಕೂಡ ಸರ್ವಪಕ್ಷಗಳ ಸಭೆಯಲ್ಲಿ ಪಿಎಸ್‌ಐಗಳ ಆಯ್ಕೆಯನ್ನು ಮಾಡಿ ಎಂದು ಹೇಳಿದ್ದೇವೆ. ಆದರೆ ಅದೊಂದನ್ನು ಬಿಟ್ಟು ಪೋಲೀಸ್ ಇಲಾಖೆಯಲ್ಲಿ, ಅಭಿವೃದ್ಧಿ ಕೆಲಸವೆಂದು ಒಂದು ರೂಪಾಯಿಯನ್ನು ಮಾನ್ಯ ಮುಖ್ಯಮಂತ್ರಿಗಳು ಕೂಡ ಕೊಟ್ಟಿಲ್ಲ, ಹಣಕಾಸು ಇಲಾಖೆಯನ್ನು ಕೂಡ ಅವರೇ ಇಟ್ಟುಕೊಂಡಿದ್ದಾರೆ.

ಅಧ್ಯಕ್ಷರು :— ಮಂತ್ರಿಗಳು ನೂರ ಐವತ್ತು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಅವ್ರೂ ಹಣವನ್ನು ಕೊಟ್ಟಿಲ್ಲ, ಅದೆಲ್ಲಾ ಪೇಪರ್ ಮೇಲಿದೆ, ಆ ವಿಚಾರ ನನಗೆ ಗೊತ್ತಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— 150ಕೋಟಿ ರೂಪಾಯಿಗಳನ್ನು ಹುಡ್ಕೋದಿಂದ ಸಾಲ ತೆಗೆದುಕೊಂಡು 5400 ಮನೆಗಳನ್ನು ಕಟ್ಟಲು ಈಗಾಗಲೇ ಟೆಂಡರ್ ಕರೆಯಲಾಗಿದೆ, ಅದು ಅಂತಿಮವಾದ ಮೇಲೆ ಮನೆಗಳನ್ನು ಕಟ್ಟಲು ಆರಂಭ ಮಾಡಲಾಗುವುದು. ಹೆಚ್ಚಾಗಿ ಅವು ಬಹುಶಃ ಕನಕಪುರ, ಬೆಂಗಳೂರು ಗ್ರಾಮಾಂತರ ಈ ಕಡೆಯಲ್ಲೇ ಸಿಗುತ್ತವೆ, ಏಕೆಂದರೆ ಎಲ್ಲೆಲ್ಲಿ ಕೊಡಬೇಕೆಂದು ಅವರು ನಿಗದಿಮಾಡಿಟ್ಟಿದ್ದಾರೆ, ನಾನು ಕಷ್ಟಪಟ್ಟು ಸಾಲ ತಂದದ್ದನ್ನು ಅವರು ಮಾಡಿದ್ದಕ್ಕೆ ಕೊಡಬೇಕಾಗಿದೆ. ಪೋಲೀಸ್ ಹುದ್ದೆಗಳು ಬದಲಾವಣೆಯಾದರೆ ಲಿಸ್ಟ್ ಬದಲಾವಣೆ ಮಾಡಬೇಕಲ್ಲವೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಆ ಪಟ್ಟಿಯನ್ನು ಬದಲಾಯಿಸುವುದಕ್ಕೆ ಹೋಗದಿದ್ದಕ್ಕೆ ಮಾನ್ಯ ಗೃಹಸಚಿವರಿಗೆ ನಾನು ವಂದಿಸುತ್ತೇನೆ, ನಾನು ನ್ಯಾಯಯುತವಾಗಿ ಮಾಡಿದ್ದೇನೆ, ಆ ಪಟ್ಟಿಯಲ್ಲಿ ಯಾದ್ಗಿರ್, ಗುರ್‌ಮಿಟ್ಕಲ್ ಹಾಗೂ ಜೀವಗಿಯನ್ನು ಸೇರಿಸಿದ್ದೇನೆ. ಮೊನ್ನೆ ರಾಜ್‌ಕುಮಾರ್‌ರವರ ಸುಗಮ ಬಿಡುಗಡೆಯಿಂದ ಪೋಲೀಸ್‌ನವರಿಗೆ ಬಹಳ ದೊಡ್ಡ ರಿಲೀಫ್ ಆಗಿದೆ, ಬೆಂಗಳೂರಿನ ಪೋಲೀಸ್‌ನವರು 24 ಗಂಟೆ ಕಾಲ ಕೆಲಸ ಮಾಡಿದ್ದಾರೆ, ಅವರಿಗೆ ಭತ್ಯೆ, ಪೆಟ್ರೋಲ್, ಡೀಸೆಲ್ ಕೊಡುವ ವಿಚಾರದಲ್ಲಿ, ವಾಹನ ರಿಪ್ಲೇಸ್‌ಮೆಂಟ್ ಮಾಡುವ ವಿಚಾರದಲ್ಲಿ ಹಣಕಾಸು ಇಲಾಖೆಯಿಂದ ಒಂದಿಷ್ಟು ಹಣ ಒದಗಿಸುವುದು ಅವಶ್ಯಕ. ಮಾನ್ಯ ಗೃಹಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಚೆನ್ನಾಗಿದ್ದರೆ ನಮಗೆ ಬಹಳ ಸಂತೋಷ, ಇದರಲ್ಲಿ ಪುತೂರಿ ಮಾಡಬೇಕೆಂದೇನೂ ನಮಗೆ ಆಸೆ ಇಲ್ಲ, ಹಣ ತೆಗೆದುಕೊಳ್ಳಿ, ಸಾಲ ತೆಗೆದುಕೊಂಡು ಮನೆಕಟ್ಟುವುದನ್ನು ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಮೀಸಲಾತಿ ಜಾರಿಗೆ ಬರುವುದಕ್ಕಿಂತ ಮುಂಚೆಯೇ ಪೋಲೀಸ್ ಇಲಾಖೆಯನ್ನು ಬಲಪಡಿಸಲು ಪಿಎಸ್‌ಐಗಳ ನೇಮಕಾತಿಗೆ ಕ್ರಮ ತೆಗೆದುಕೊಳ್ಳಲಾಯಿತು. ಈಗ ಹಾಲಿ ಹೆಡ್‌ಕಾನ್‌ಸ್ಟೇಬಲ್ ಆಗಿ ಕೆಲಸ ಮಾಡುತ್ತಿರುವವರು ಯಾರಿದ್ದಾರೆ, ಅವರಿಂದು ಸುಮಾರು 150 ಹುದ್ದೆಗಳನ್ನು ಹಾಗೆಯೇ ಬಿಟ್ಟಿರಿ. ಆದರೆ ನೇರ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದೆ. ಈಗಾಗಲೇ ಸೇವೆಯಲ್ಲಿರುವವರನ್ನು ಎಸ್‌ಐ ಆಗಿ ಮಾಡುವುದು ಚಾಲ್ತಿಯಲ್ಲಿ ಬರುತ್ತದೆಂದು ತಾವೇ ಈ ಸದನದಲ್ಲಿ ಹೇಳಿದ್ದೀರಿ, ಅದಕ್ಕೆ ಸ್ವಲ್ಪ ಚಾಲ್ತಿಯನ್ನು ಕೊಟ್ಟರೆ ಬಹಳ ಒಳ್ಳೆಯದೆಂಬುದು ನನ್ನ ಅಭಿಪ್ರಾಯ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಮಾನ್ಯ ಅಧ್ಯಕ್ಷರೆ, ಎರಡನೆಯದಾಗಿ, ಪೋಲೀಸ್ ಇಲಾಖೆಯೊಳಗೆ ಏನಾಗಬೇಕೆನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ನಾನು ಕೂಡ ಬಹಳ ಪ್ರಯತ್ನ ಮಾಡಿದೆ, ನಮ್ಮ ರಾಜಕೀಯ ವ್ಯತ್ಯಾಸಗಳಿಂದ ಇರಬಹುದು, ಎಸ್‌ಐ ಕೇಸ್ ಕೊಟ್ಟ ತಕ್ಷಣವೇ ಕೌಂಟರ್ ಕೇಸ್ ಕರೆಯಿಸಿಕೊಳ್ಳುತ್ತಾರೆ. ಎಲ್ಲಾ ಪೋಲೀಸ್ ಠಾಣೆಗಳಲ್ಲೂ ಇದು ಇದೆ; ಹಾಗಿದ್ದರೆ, ಅವರು ಏನು ಕ್ರಮ ತೆಗೆದುಕೊಳ್ಳುತ್ತಾರೆ? ನಾನು ಸಾಕಷ್ಟು ಪ್ರಯತ್ನ ಮಾಡಿದೆ, ಪ್ರತಿಯೊಂದು ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲೂ ಕೂಡ ಮೂರು ಆರು ತಿಂಗಳಿಗೊಮ್ಮೆ ಸಾರ್ವಜನಿಕ ಸಂಪರ್ಕ ಸಭೆಗಳನ್ನು ಮಾಡುವ ಕಾರ್ಯಕ್ರಮವನ್ನು ನಾನು ಪ್ರಾರಂಭ ಮಾಡಿಸಿದ್ದೆ. ಅದನ್ನು ನೀವು ಪುನರ್ ಆರಂಭ ಮಾಡಿಸಬೇಕು, ಅದರಿಂದ ನಿಜವಾಗಿಯೂ ಕೂಡ ಉಪಯೋಗವಾಗುತ್ತದೆ. ಆರಂಭದಲ್ಲಿ ಹೊಡೆದಾಟವಾಗುತ್ತದೆ, ಯಾರು ಕೌಂಟರ್ ಕೇಸ್ ಹಾಕಿರುತ್ತಾನೆ ಅವನು ಎಕ್ಸ್‌ಪೋಸ್ ಆಗುತ್ತಾನೆ. ಎರಡನೆಯದಾಗಿ, the morale of the police is very very important. But unfortunately, irrespective of our political affiliations ಇದು ಸಾಧ್ಯವಾಗುತ್ತಿಲ್ಲ. ಇದಕ್ಕೆ ಟ್ರಾನ್ಸ್‌ಫರ್ಸ್ ಒಂದು ಕಾರಣವಾದರೆ, ಮತ್ತೊಂದು ನೀವು ಯಾವುದೇ ಅಧಿಕಾರಿಯು ಕಾನ್ಫಿಡೆನ್‌ಷಿಯಲ್ ರಿಪೋರ್ಟ್‌ನ್ನು ತೆಗೆದುಕೊಂಡು ನೋಡಿದರೂ 'ವೆರಿಗುಡ್' 'ಎಕ್ಸಲೆಂಟ್' ಎಂದೇ ಇರುತ್ತದೆ. ಇವುಗಳನ್ನು ಬಿಟ್ಟರೆ ಬೇರೆ ಯಾವ ಶಬ್ದಗಳೂ ಇಲ್ಲವೇ ಇಲ್ಲ. ಅಂದರೆ ಇವರು ಏನೂ ತಪ್ಪು ಮಾಡುವುದೇ ಇಲ್ಲ ಎನ್ನುವ ರೀತಿಯಲ್ಲಿ ಇದು ಇದೆ. ಇದನ್ನು ಸರಿಪಡಿಸಲು ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ? ಏಕೆಂದರೆ, ಪೋಲೀಸ್ ಇಲಾಖೆಯಲ್ಲಿ ಡಿಸಿಪ್ಲಿನ್ ಎನ್ನತಕ್ಕಂಥಾದ್ದು ಬಹಳ ಮುಖ್ಯ, ನಾನು ಏಕೆ ಇದನ್ನು ಹೇಳುತ್ತಿದ್ದೇನೆ ಎಂದರೆ, ಈ ಶಸ್ತ್ರಕ್ಕೆ, ಈ ಆಯುಧಕ್ಕೆ ನಾವು ಎಂಥ ಒಂದು ಶಕ್ತಿಯನ್ನು ಕೊಡುತ್ತಿದ್ದೇವೆ ಎಂದರೆ ಮರಣದಂಡನೆ. ಈ ಮಸೂದೆಯ ಪ್ರಕಾರ, ಯಾರೇ ಆಗಲಿ ಒಂದು ಆರ್ಗನೈಸ್ಡ್ ಕ್ರೈಮ್‌ನಲ್ಲಿ ಒಂದು ಕೇಸನ್ನು ಬುಕ್ ಮಾಡಬೇಕಾದರೆ ಡಿ.ಐ.ಜಿ. ಪರ್ಮಿಷನ್ ಅನ್ನು ತೆಗೆದುಕೊಳ್ಳಬೇಕಾಗುತ್ತದೆ. ಆ ಒಂದು ಸೇಫ್ಟಿಯನ್ನು ಇವರು ಇಟ್ಟಿದ್ದಾರೆ. ಎರಡನೆಯದಾಗಿ, ಪ್ರತಿವರ್ಷವೂ ವಿಧಾನಮಂಡಲದ ಮುಂದೆ, ಈ ಕಾನೂನಿನ ಅಡಿಯಲ್ಲಿ ಎಷ್ಟು ಕೇಸುಗಳನ್ನು ಬುಕ್ ಮಾಡಲಾಗಿದೆ ಎನ್ನುವುದನ್ನು ತಾವು ರಿಪೋರ್ಟ್ ಮಾಡಬೇಕಾಗುತ್ತದೆ. ಇದನ್ನು ನಾನು ಸ್ವಾಗತಿಸುತ್ತೇನೆ. ಮೂರನೆಯದಾಗಿ, ಇದರ ದುರುಪಯೋಗ ಆಗುವುದನ್ನು ತಪ್ಪಿಸಬೇಕು. ನೀವು ಇದಕ್ಕೆ ಇಷ್ಟೆಲ್ಲಾ ಶಕ್ತಿಯನ್ನು ಕೊಟ್ಟು, ಬೇಕುಬೇಕಾದವರನ್ನು ಬೇಕುಬೇಕಾದ ಜಾಗಗಳಲ್ಲಿ ಹಾಕಿಬಿಟ್ಟರೆ ವಿರೋಧಪಕ್ಷದಲ್ಲಿ ಕುಳಿತಿರುವವರ ಪರಿಸ್ಥಿತಿ ಏನಾಗುತ್ತದೆ? ಇದಕ್ಕೋಸ್ಕರವಾಗಿ ನಾನು ಹೇಳುತ್ತಿದ್ದೇನೆ, ಪೋಲೀಸ್ ಇಲಾಖೆಯನ್ನು ಆರ್ಥಿಕವಾಗಿ ಸ್ಟ್ರಾಂಥೆನ್ ಮಾಡತಕ್ಕಂಥಾದ್ದು ಒಂದು ಆದರೆ, ಎರಡನೆಯದಾಗಿ ಅದರ ಮೊರೇಲ್ ಅನ್ನು ಹೈ ಆಗಿ ಇಟ್ಟುಕೊಳ್ಳತಕ್ಕಂಥಾದ್ದು ಆಗಬೇಕು. ಮೂರನೆಯದಾಗಿ,

ಇದರ ದುರುಪಯೋಗ ಆಗದಹಾಗೆ ತಾವು ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆ ಬಗ್ಗೆ ಒಂದು ಭರವಸೆಯನ್ನು ತಾವು ಕೊಡಬೇಕಾಗುತ್ತದೆ. ಏಕೆಂದರೆ, ಅವರಿಗೆ ಯಾರ ಮೇಲೆ ಸಂಶಯ ಬರುತ್ತದೆ, ಅಂಥವರ ಫೋನ್‌ಗಳನ್ನು ಟ್ಯಾಪ್ ಮಾಡತಕ್ಕಂಥ ಅಧಿಕಾರವನ್ನು ಈ ಕಾನೂನಿನಲ್ಲಿ ಅಧಿಕಾರಿಗಳಿಗೆ ಕೊಡುತ್ತಿದ್ದೀರಿ. He can tape all the conversations. ಆದ್ದರಿಂದ ಅಲ್ಲಿ ಬ್ಲ್ಯಾಕ್‌ಶೀಪ್‌ಗಳು ಇರಬಾರದು ಎಂದು ಹೇಳುತ್ತೇನೆ. ನಾನು ಆಗಲೇ ಹೇಳಿದ ಹಾಗೆ, J.M.C it is a shame to the judiciary of India. ಹೌದೋ, ಅಲ್ಲವೋ ಹೇಳಿ? ಆ ತರಹದ ಅಧಿಕಾರಿಗಳ ಕೈಗೆ ಇಂಥ ಅಸ್ತ್ರಗಳನ್ನು ಕೊಟ್ಟಾಗ ಅವರು ನಿಷ್ಪಕ್ಷಪಾತವಾಗಿ ಕೆಲಸ ಮಾಡದಿದ್ದರೆ ಏನಾಗುತ್ತದೆ ಎನ್ನುವ ದೃಷ್ಟಿಯಿಂದ ಒಂದು ಎಚ್ಚರಿಕೆಯ ಮಾತನ್ನು ಹೇಳುತ್ತಿದ್ದೇನೆ. ಇದರಿಂದಲೇ ಈ ಕಾನೂನಿನ ದುರುಪಯೋಗವಾಗದ ಹಾಗೆ ನೋಡಿಕೊಳ್ಳುವ ಕರ್ತವ್ಯ ಗೃಹಮಂತ್ರಿಗಳದ್ದು ಎನ್ನುವುದನ್ನು ನಾನು ಹೇಳಿದ್ದು. ಇನ್ನು, organised crimes ಒಂದು ಕಡೆ ಕೇರಳದಿಂದ, ಇನ್ನೊಂದು ಕಡೆ ಮುಂಬೈನಿಂದ, ಮತ್ತೊಂದು ಕಡೆ ಹೈದರಾಬಾದಿನಿಂದ, ಮಗದೊಂದು ಕಡೆ ಚನ್ನೈದಿಂದ ನಡೆಯುತ್ತಿವೆ. ಇದರಲ್ಲಿ ಕೋಟ್ಯಾಂತರ ರೂಪಾಯಿ ವ್ಯವಹಾರಗಳ ಜಾಲ ಇರುತ್ತದೆ. ಯಾರೋ ಒಬ್ಬ ಅಧಿಕಾರಿ 10-20-30 ಸಾವಿರವನ್ನು ಮಾಮೂಲಿ ತೆಗೆದುಕೊಂಡ ಎಂದು ನಾವು ಇಲ್ಲಿ ಗಂಟೆಗಟ್ಟಲೆ ಕುಳಿತು ಚರ್ಚೆ ಮಾಡಿ, ಅವನನ್ನು ಜೈಲಿಗೆ ಹಾಕಿ ಎಂದು ಹೇಳುತ್ತೇವೆ. ಆದರೆ ಇಲ್ಲಿ ನಡೆಯುತ್ತಿರತಕ್ಕಂಥಾದ್ದು ಕೋಟ್ಯಾಂತರ ರೂಪಾಯಿಗಳ ವ್ಯವಹಾರ. ನಮ್ಮ ಮಿತ್ರರಾದ ಮಾನ್ಯ ಸುರೇಶ್‌ಕುಮಾರ್‌ರವರು ಸೈಬರ್ ಕ್ರೈಮ್ಸ್ ವಿಚಾರವನ್ನು ಹೇಳಿದರು. That is going to be the crimes of not of tomorrow or future, it is of today. ಅದನ್ನು ಗಮನದಲ್ಲಿಟ್ಟುಕೊಂಡು ಈ ಒಂದು ವಿಧೇಯಕವನ್ನು ತಂದಿರುವುದು ಬಹಳ ಒಳ್ಳೆಯದು. ಎಕನಾಮಿಕ್ ಲಿಬರಲೈಸೇಷನ್ ಆದಮೇಲೆ ವೀಸಾ ಸಿಗತಕ್ಕಂಥಾದ್ದು, ವಿದೇಶಗಳಿಗೆ ಹೋಗುವುದು, ಬರುವುದು ಹೆಚ್ಚಾಗುತ್ತಿದೆ ಎನ್ನುವುದನ್ನು ನಾವು ಪ್ರತಿ ದಿನ ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಅದಕ್ಕಾಗಿಯೇ ನಾನು ಜೈಲುಗಳಲ್ಲಿರುವ ಹ್ಯಾಬಿಚುಯಲ್ಸ್‌ಗಳ ಉದಾಹರಣೆಯನ್ನು ಕೊಟ್ಟಿದ್ದು. ಈ ಹ್ಯಾಬಿಚುಯಲ್‌ಗಳು ಮಾಡತಕ್ಕಂಥ ಕೃತ್ಯಗಳು ಇದರ ಮುಂದೆ ನಿಗ್ಲಿಜಬಲ್. ಈ ವಿಧೇಯಕವನ್ನು ನಾವು ಇಲ್ಲಿ ಪಾಸ್ ಮಾಡಿಕೊಟ್ಟ ಮೇಲೆ ತಾವು ಇದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಅವರು ಮಾತನಾಡುತ್ತಿರುವುದನ್ನು ನೋಡಿದರೆ, ಅವರು ಗೃಹ ಮಂತ್ರಿಗಳೇನೋ, ಬೇಡಿಕೆಗಳ ಮೇಲೆ ಉತ್ತರ ಕೊಡುತ್ತಿದ್ದಾರೇನೋ ಎನ್ನುವ ಅನುಮಾನ ಬರುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಬೆಳಿಗ್ಗೆ ನಾನು ಹೋಂ ಮಿನಿಸ್ಟರ್ ಅಲ್ಲ, ಈಗ ಹೋಂ ಮಿನಿಸ್ಟರ್. ಬೆಳಿಗ್ಗೆ ನಾನು ರಾಜ್ಯಪಾಲರಿಗೂ, ಮುಖ್ಯಮಂತ್ರಿಗಳಿಗೂ ಇರುವ

ವ್ಯತ್ಯಾಸ ಇದು ಎಂದು ಹೇಳಿದೆ. ಇದನ್ನು ತಾವು ಕಡತದಿಂದ ತೆಗೆಯಬೇಡಿ. ಬೇಕಾದರೆ ನಾನೇ ವಾಪಸ್ಸು ತೆಗೆದುಕೊಳ್ಳುತ್ತೇನೆ. ಆಗ ನಾನು ಹೋಂ ಮಿನಿಸ್ಟರ್ ಅಲ್ಲ, ಈಗ ಮಾತ್ರ ಹೋಂ ಮಿನಿಸ್ಟರ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಅವರು ನಮಗೆ ಹೆಚ್ಚು ದುಡ್ಡು ಕೊಡಿಸಲು ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕೆ ನೀವೇಕೆ ತೊಂದರೆ ಮಾಡುತ್ತಿದ್ದೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ :— ಈ ರಾಜ್ಯವನ್ನು ಆರ್ಥಿಕವಾಗಿ ಮೇಲೆ ತೆಗೆದುಕೊಂಡು ಹೋಗುವ ದೃಷ್ಟಿಯಿಂದ, ಕರ್ನಾಟಕದ ಅಭಿವೃದ್ಧಿಯ ವೇಗ ಜಾಸ್ತಿಯಾಗಬೇಕು ಎನ್ನುವ ದೃಷ್ಟಿಯಿಂದ, ಭಾರತ ದೇಶದಲ್ಲಿ ಕರ್ನಾಟಕ ಒಂದು ಕಾನೂನು ಸುಭದ್ರವಾಗಿರುವಷ್ಟಂಥ ರಾಜ್ಯವಾಗಬೇಕಾದರೆ, ಪ್ರಗತಿ ಆಗಬೇಕಾದರೆ, ಇಂಥ ಸಮಾಜ ದ್ರೋಹಿಗಳಿಗೆ ಇದು ತಾಣವಾಗಬಾರದು. ಎಲ್.ಟಿ.ಟಿ.ಇ. ಅವರನ್ನು ಟೀಕೆ ಮಾಡುವುದಷ್ಟೇ ಅಲ್ಲ, ಎಲ್.ಟಿ.ಟಿ.ಇ. ಜೊತೆ ಹಣಬಲ ಇರತಕ್ಕಂಥ ಜನಗಳು ಬೇರೆ ಬೇರೆ ಹುಲಿವೇಷಗಳಲ್ಲಿ ಬರುತ್ತಾರೆ. ಈ ಹುಲಿವೇಷಗಳನ್ನು ಪತ್ತೆ ಮಾಡಿ, ಈ ನರಿಗಳನ್ನು, ಕುತಂತ್ರಿಗಳನ್ನು, ಸಮಾಜ ಬಾಹಿರ ಶಕ್ತಿಗಳನ್ನು ಹಿಡಿಯಲು, ಅವರನ್ನು ನಿಯಂತ್ರಣ ಮಾಡಲು ತಾವು ಹೊರಟಿರುವುದು ಒಳ್ಳೆಯ ಕೆಲಸ. ಇದಕ್ಕೆ ನಮ್ಮ ಸಹಮತ ಇದೆ. ಇಂಥ ಕಾನೂನುಗಳನ್ನು ಎಷ್ಟು ಬೇಕಾದರೂ ತೆಗೆದುಕೊಂಡು ಬನ್ನಿ. ಆದರೆ ಈ ಕಾನೂನುಗಳ ಅಡಿಯಲ್ಲಿ ಮಾಡತಕ್ಕಂಥ ಸಂದರ್ಭದಲ್ಲಿ, ನೀರಾವರಿ ಸೊಸೈಟಿಗಳಲ್ಲಿ ಮಾಡಿದಹಾಗೆ, ಕೋ-ಆಪರೇಟೀವ್ ಆಕ್ಟ್‌ಗೆ ಅಮೆಂಡ್‌ಮೆಂಟ್ ತಂದ ಹಾಗೆ ಇಲ್ಲಿ ಮಾಡಲು ಹೋಗಬೇಡಿ, ಇದನ್ನು ನಿಷ್ಪಕ್ಷಪಾತವಾಗಿ ಮಾಡಿ ಎಂದು ಹೇಳುತ್ತೇನೆ.

ಶ್ರೀ ಕೆ.ಎಸ್. ಸುಬ್ಬಾರೆಡ್ಡಿ :— ಮಾನ್ಯ ಅಧ್ಯಕ್ಷರೆ, ನಾನು ಒಂದೇ ಒಂದು ಕ್ಲಾರಿಫಿಕೇಷನ್ ಕೇಳುತ್ತಿದ್ದೇನೆ. ಸೆಕ್ಷನ್ 12ರಲ್ಲಿ, ..an appeal shall lie from any judgement, sentence, or order, not being an interlocutory order ಎಂದಿದೆ ಇದು ಬಹಳ ಮುಖ್ಯ. ಇದರ ಪ್ರಕಾರ interlocutory ಆರ್ಡರ್ ಮೇಲೆ ಅಪೀಲ್ ಇಲ್ಲವೆಂದರೆ ಹೇಗೆ? ಇನ್ನು ಸೆಕ್ಷನ್ 2(ಎಫ್)ನಲ್ಲಿ ಆರ್ಗನೈಸ್ಡ್ ಕ್ರೈಮ್ ಸಿಂಡಿಕೇಟ್ ಎಂದು ಇದೆ. ಸಿಂಡಿಕೇಟ್ ಎಂದರೆ ಯಾವುದು ಸ್ವಾಮಿ? ಹಿಂದೆ ಇಂದಿರಾಗಾಂಧಿಯವರ ಕಾಲದಲ್ಲಿ ಸಿಂಡಿಕೇಟ್ ಎಂದು ಇತ್ತು. ಈಗ ಅದು ಬೇಕಾಗಿಲ್ಲ. ಆರ್ಗನೈಸ್ಡ್ ಕ್ರೈಮ್ ಎಂದರೆ ಸಾಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಾನಂದಗೌಡರು, ಮಾನ್ಯ ಸುರೇಶ್ ಕುಮಾರ್‌ರವರು ಮತ್ತು ಮಾನ್ಯ ಸಿಂಧ್ಯಾರವರು ಮಾತನಾಡುವಾಗ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಸುಬ್ಬಾರೆಡ್ಡಿಯವರು ಕ್ಲಾರಿಫಿಕೇಷನ್

ಕೇಳಿದ್ದಾರೆ. ಇವರು ಮಾತನಾಡುವಾಗ, ಈ ಒಂದು ಕಾನೂನು ಒಳ್ಳೆಯ ಕಾನೂನಾಗಿದೆ, ಇದನ್ನು ನಾವು ಸ್ವಾಗತ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಅದರ ದುರುಪಯೋಗವಾಗಬಾರದು ಎನ್ನುವ ಎಚ್ಚರಿಕೆಯನ್ನು ಕೂಡ ನಮಗೆ ಕೊಟ್ಟಿದ್ದಾರೆ. ಮಾನ್ಯ ಸದಾನಂದಗೌಡರು ಭಾಷಣ ಮಾಡುವಾಗ, ಸೆಕ್ಷನ್ 14, 15 ಮತ್ತು 16ರ ಇವುಗಳ ದುರುಪಯೋಗವಾಗದ ರೀತಿಯಲ್ಲಿ ನೋಡಿಕೊಳ್ಳಬೇಕು ಎಂದು ಹೇಳಿದ್ದಾರೆ. ಸೆಲ್ಯುಲಾರ್ ಫೋನ್‌ಗಳನ್ನು ಮತ್ತು ಟೆಲಿಫೋನ್‌ಗಳನ್ನು ಟ್ಯಾಪ್ ಮಾಡುವಾಗ, ಇನ್ನೋಸೆಂಟ್ ಜನರ ಫೋನ್‌ಗಳನ್ನು ಟ್ಯಾಪ್ ಮಾಡತಕ್ಕಂಥಾದ್ದಾಗಲೀ ಅಥವಾ ಇನ್ನೋಸೆಂಟ್ ಜನರನ್ನು ಇದರಲ್ಲಿ ಇನ್‌ವಾಲ್ವ್ ಮಾಡತಕ್ಕಂಥಾದ್ದಾಗಲೀ ಆಗಬಾರದು ಎಂದು ಹೇಳಿದ್ದಾರೆ. ಖಂಡಿತವಾಗಿಯೂ ಅಂಥದ್ದಾವುದಕ್ಕೂ ನಾವು ಸ್ಕೋಪ್ ಕೊಡುವುದಿಲ್ಲ. ಯಾವುದೇ ಒಂದು ಟೆಲಿಫೋನನ್ನು ಟ್ಯಾಪ್ ಮಾಡಬೇಕಾದರು ಸರ್ಕಾರದ ಅನುಮತಿ ಬೇಕು. ಸರ್ಕಾರದ ಪರ್ಮಿಷನ್ ಇಲ್ಲದೇ ಅದನ್ನು ಮಾಡಲು ಬರುವುದಿಲ್ಲ. ಹಾಗಾಗಿ, ಇದು ದುರುಪಯೋಗವಾಗುತ್ತದೆ ಎನ್ನತಕ್ಕಂಥಾದ್ದು ಸರಿಯಲ್ಲ. ಏಕೆಂದರೆ, ಮುಂದೆ ಇದು ರಿವ್ಯೂ ಕಮಿಟಿ ಮುಂದೆ ಕೂಡ ಹೋಗುತ್ತದೆ. ಅದರಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿರುತ್ತಾರೆ, ಗೃಹ ಇಲಾಖೆಯ ಕಾರ್ಯದರ್ಶಿಗಳಿರುತ್ತಾರೆ, ಹೀಗೆ ಎಲ್ಲ ಉನ್ನತ ಅಧಿಕಾರಿಗಳು ಇದರಲ್ಲಿ ಇರುವುದರಿಂದ, ಕೆಲವು ಸಣ್ಣಪುಟ್ಟ ಅಧಿಕಾರಿಗಳು ಇದನ್ನು ಮಿಸ್‌ಯೂಸ್ ಮಾಡುತ್ತಾರೆ ಎನ್ನತಕ್ಕಂಥಾದ್ದು ಆಗುವುದಿಲ್ಲ. ಎಸ್.ಪಿ.ಗಳೇ ದೂರನ್ನು ತೆಗೆದುಕೊಳ್ಳುವುದರಿಂದ ಇದರ ದುರುಪಯೋಗವಾಗತಕ್ಕಂಥ ಸಾಧ್ಯತೆಗಳು ಬಹಳ ಕಡಿಮೆ ಅಥವಾ ವಿರಳ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಲು ನಾನು ಬಯಸುತ್ತೇನೆ. ಶ್ರೀಮಾನ್ ಸುರೇಶ್‌ಕುಮಾರ್‌ರವರು ಸೆಕ್ಷನ್ 19ರ ಬಗ್ಗೆ ಕೆಲವು ಆಸಮಾಧಾನಗಳನ್ನು ವ್ಯಕ್ತಮಾಡಿದ್ದಾರೆ. ಕನ್‌ಫೆಷನ್ ಬಗ್ಗೆ ತಾವು ಹೇಳಿದಿರಿ. ಇಲ್ಲಿ ಕೂಡ ಅಧಿಕಾರಿ ಇರತಕ್ಕಂಥವರು, not below the rank of Superintendent of Police. ಒಬ್ಬ ಸಾಧಾರಣ ಸಬ್ ಇನ್ಸ್‌ಪೆಕ್ಟರ್ ಅಥವಾ ಸರ್ಕಲ್ ಇನ್ಸ್‌ಪೆಕ್ಟರ್ ಥರ್ಡ್ ಡಿಗ್ರಿ ಮೆಥಡ್ ಉಪಯೋಗ ಮಾಡಿ, ಹೊಡೆದು ಬಡಿದು ಮಾಹಿತಿಯನ್ನು ಪಡೆದುಕೊಳ್ಳುತ್ತಾರೆ ಎಂದಾಗ ಅದು ಬೇಕು. ಆದರೆ ಇಲ್ಲಿ ಎಸ್.ಪಿ.ಯವರೇ ಈ ಕೆಲಸವನ್ನು ತೆಗೆದುಕೊಳ್ಳುವುದರಿಂದ ಬಹುಶಃ ಇದು ದುರುಪಯೋಗವಾಗುವುದಿಲ್ಲ. ಇದು ಒಂದು ಫ್ರೀ ವಾತಾವರಣದಲ್ಲಿ ಆಗಬೇಕು ಮತ್ತು ಅವರ ಮೇಲೆ ಯಾವುದೇ ಒತ್ತಡ ಹೇರಬಾರದು ಎಂಬುದನ್ನು ಸೆಕ್ಷನ್ 19(2)ರಲ್ಲಿ ಅಳವಡಿಸಿದ್ದೇವೆ. ಇದು ಒಳ್ಳೆಯ ಕಾನೂನೆಂದು ತಾವು ಒಪ್ಪಿಕೊಂಡಿದ್ದೀರಿ ಮತ್ತು ಮನಗಂಡಿದ್ದೀರಿ. ಇದರ ಬಗ್ಗೆ ನಾನು ಹೆಚ್ಚಿಗೆ ಏನೂ ಹೇಳಬೇಕಾಗಿಲ್ಲ. ಮಾನ್ಯ ಸಿಂಧ್ಯಾ ಅವರು ಕೇಳಿದಂಥ ಕೆಲವು ವಿಚಾರಗಳನ್ನು ಪುನಃ ಪ್ರಸ್ತಾಪ ಮಾಡತಕ್ಕಂಥ ಅವಶ್ಯಕತೆಯಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ನಾವು ಅನೇಕ ಸಲ ಲಿಸ್ಟ್ ಏನು ಅಪರೇಟ್ ಮಾಡುತ್ತೇವೆ ಅದು ವರ್ಷಾನುಗಟ್ಟಲೆ ಪೊಲೀಸ್ ಸ್ಟೇಷನ್‌ನಲ್ಲಿ ಇದ್ದಂಥ ರೌಡಿಗಳ

ಪಟ್ಟಿಯಾಗಿರುತ್ತದೆ. ನೀವು ಗೃಹಸಚಿವರಾಗಿದ್ದಂಥ ಕಾಲದಲ್ಲಿ ಇದ್ದಂಥ ಲಿಸ್ಟ್ನೇ ಡಾ: ರಾಜ್‌ಕುಮಾರ್ ಅವರ ಬಿಡುಗಡೆ ಸಮಯದಲ್ಲಿ ಆಥವಾ ಬಂದ್ ಕಾಲದಲ್ಲಿ ಅಪರೇಟ್ ಮಾಡಿರುವಂಥಾದ್ದು. ಅದರಲ್ಲಿ ಒಂದೆರಡು ಅಡಿಷನಲ್ ಆಗಿ ಸೇರಿರಬಹುದು. ಆದರೂ ತಾವು ಹೇಳಿದ ಹಾಗೆ ಸುಧಾರಣೆ ಆದಂಥವರಿಗೆ ಕೂಡ ಗದಾಪ್ರಹಾರ ಆಗತಕ್ಕಂಥ ಸಾಧ್ಯತೆ ಕೂಡ ಇರುತ್ತದೆ. ಅದಕ್ಕೆ ರಿವ್ಯೂ ಮಾಡತಕ್ಕಂಥ ಅವಶ್ಯಕತೆಯಿದೆ. ಏಕೆಂದರೆ ಅನೇಕ ಸಲ ಕೆಲವು ಅಪರಾಧ ಮಾಡತಕ್ಕಂಥವರು ಸುಧಾರಣೆ ಮಾಡಿಕೊಂಡು ತಮ್ಮ ಜೀವನವನ್ನು ಸಾಗಿಸತಕ್ಕಂಥ ವ್ಯಕ್ತಿಗಳು ಕೂಡ ಇದ್ದಾರೆ. ಅದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಿಲ್ಲ. ತಮಗೆಲ್ಲರಿಗೂ ಕೂಡ ಗೊತ್ತಿದೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ಮೊದಲನೆಯ ಸಲ ಕೇಂದ್ರ ಸರ್ಕಾರದ ಗೃಹಸಚಿವರು ಈ ವರ್ಷಕ್ಕೆ ಕರ್ನಾಟಕ ರಾಜ್ಯಕ್ಕೆ 75 ಕೋಟಿ ರೂಪಾಯಿಗಳನ್ನು ವಿಶೇಷವಾಗಿ ಕಮ್ಯುನಿಕೇಷನ್‌ಗೆ, ವೆಪನ್ಸ್‌ಗೆ ಮತ್ತು ಟ್ರೈನಿಂಗ್‌ಗೆ ಕೊಟ್ಟು ಇಲಾಖೆಯನ್ನು ಸ್ಟ್ರಾಂಥನ್ ಮಾಡುವುದಕ್ಕೆ ಮ್ಯಾಚಿಂಗ್ ಗ್ರ್ಯಾಂಟ್ ಆಗಿ ಕೊಡುತ್ತೇವೆ. ನೀವು ಒಂದು ರೂಪುರೇಷೆ ಹಾಕಿ ಯೋಜನೆಯನ್ನು ತಯಾರು ಮಾಡಿ ಕಳುಹಿಸಿ ಎಂದು ಪತ್ರ ಬರೆದಿದ್ದಾರೆ. ಈಗಾಗಲೇ ನಮ್ಮ ಅಧಿಕಾರಿಗಳು ಯೋಜನೆಯನ್ನು ತಯಾರು ಮಾಡುತ್ತಿದ್ದಾರೆ. ತಕ್ಷಣ ಆ ಯೋಜನೆಯನ್ನು ಕಳುಹಿಸಿ ಹಣವನ್ನು ಪಡೆದುಕೊಳ್ಳುತ್ತೇವೆ. ಕೇಂದ್ರ ಸರ್ಕಾರದಿಂದ ಹಣ ತೆಗೆದುಕೊಳ್ಳುವಂಥಾದ್ದು ಬಫೆ ಸಿಸ್ಟಮ್ ಇದ್ದ ಹಾಗೆ. ಯಾರು ಒತ್ತಾಯ ಮಾಡಿ ಹೋಗಿ ತೆಗೆದುಕೊಂಡು ಬರುತ್ತಾರೋ ಅವರಿಗೆ ಹಣ ಸಿಗುತ್ತದೆ. ಕೆಲವು ಸಲ ಪ್ರಯತ್ನ ಮಾಡಿದರೂ ಸಿಗುವುದಿಲ್ಲ. ಅದು ಬೇರೆ ವಿಚಾರ. ವಿಶೇಷವಾಗಿ ಸ್ವಲ್ಪ ಒತ್ತಾಯ ಮಾಡಿ ಪರ್‌ಸ್ಯೂಅನ್ಸ್ ಮಾಡಿದರೆ ನಮಗೆ ಕೇಂದ್ರ ಸರ್ಕಾರದಿಂದ ಹಣ ಸಿಗುತ್ತದೆ. ಆದರೆ ಈ ಸಲ ಶ್ರೀ ಅಧ್ವಾನಿ ಅವರು ವಿಶೇಷವಾಗಿ ಎಲ್ಲಾ ಮುಖ್ಯಮಂತ್ರಿಗಳ ಸಭೆಯನ್ನು ಕರೆದು ನಿಮಗೆ ತೊಂದರೆಗಳೇನಿವೆ ಎಂದು ಕೇಳಿದಮೇಲೆ ಅವರು ಸ್ಥಳದಲ್ಲಿಯೇ ಮಾನ್ಯ ಪ್ರಧಾನಮಂತ್ರಿಗಳ ಮೂಲಕ ಅನೌನ್ಸ್ ಮಾಡಿಸಿದರು. ಏಕೆಂದರೆ ಪೋಲೀಸ್ ಇಲಾಖೆಗೆ ಕೊಡತಕ್ಕಂಥ ಹಣ ಬಹಳ ಕಡಿಮೆ ಮತ್ತು ಕ್ರೈಮ್ಸ್ ದಿನೇದಿನೇ ಹೆಚ್ಚು ಆಗುತ್ತಿವೆ, ಅದರಲ್ಲಿ ಸೈಬರ್ ಕ್ರೈಮ್ಸ್, ಗ್ಯಾಂಗ್‌ಸ್ಟರ್, ಸುಪಾರಿ ಕೊಲೆಗಳು, ಸ್ಮಗ್ಲರ್ಸ್ ಇವರುಗಳೇ ಹೆಚ್ಚಾಗಿದ್ದಾರೆ. ಹಿಂದೆ ಕೇವಲ ದರೋಡೆಗಳು, ಕೊಲೆಗಳು, ಕಳ್ಳತನಗಳು ಇಂಥವು ಇದ್ದವು. ಆದರೆ ಈಗ ಇದರ ಜೊತೆ ಜೊತೆಗೆ ಆರ್ಥಿಕ ಅಪರಾಧಗಳ ಬೆಳವಣಿಗೆಗಳು ಜಾಸ್ತಿಯಾಗಿದೆ. ಆರ್ಥಿಕ ಅಪರಾಧಗಳ ಬೆಳವಣಿಗೆಯ ರೆಫರೆನ್ಸ್ ಮರ್ಡರ್ಸ್‌ನಲ್ಲಿ ಆಗಬಹುದು, ಆಸ್ತಿಯನ್ನು ಕಬಳಿಸುವಂಥಾದ್ದು, ಒಬ್ಬರ ಮನೆಯನ್ನು ಹಾಳುಮಾಡುವಂಥಾದ್ದು ಆಗಬಹುದು. ದೇಶವನ್ನು ಹಾಳು ಮಾಡತಕ್ಕಂಥ ವ್ಯವಸ್ಥೆಯನ್ನು ಕೆಲವು ಜನ ಇಟ್ಟುಕೊಂಡು ಕುಳಿತಿದ್ದಾರೆ. ಅದಕ್ಕೆ ಅಂಥವರನ್ನು ಸದೆಬಡಿಯಬೇಕೆಂದು ಆ ಒಂದು ಕಾನ್‌ಫರೆನ್ಸ್‌ನಲ್ಲಿ ಇಡೀ ದೇಶಕ್ಕೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ವಾಗ್ದಾನ ಮಾಡಿದ ಮೇಲೆ ಸದರಿ 1000

ಕೋಟಿ ರೂಪಾಯಿಗಳಲ್ಲಿ ನಮ್ಮ ರಾಜ್ಯಕ್ಕೆ 75 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ವಾಗ್ದಾನ ಮಾಡಿ ಕೇಂದ್ರ ಸರ್ಕಾರದ ಗೃಹ ಸಚಿವರು ಪತ್ರ ಬರೆದಿದ್ದಾರೆ. ಆ ಪತ್ರ ನಮ್ಮ ಮಾನ್ಯ ಮುಖ್ಯಮಂತ್ರಿಗಳ ಹೆಸರಿಗೆ ಬಂದಿರುವುದನ್ನು ನನಗೆ ಕಳುಹಿಸಿಕೊಟ್ಟ ಮೇಲೆ ಇದೇ ವಿಷಯದ ಮೇಲೆ ನಾವು ಮೀಟಿಂಗ್‌ನ್ನು ಮಾಡಿ ಹಣವನ್ನು ಕೇಳುವುದಕ್ಕೆ ಮುಂದಾಗಿದ್ದೇವೆ. ಇನ್ನು ಪೋಲೀಸರ ವಸತಿ ಗೃಹಗಳಿಗಾಗಿ ಹುಡ್ಕೋದಿಂದ ಸುಮಾರು 160 ಕೋಟಿ ರೂಪಾಯಿಗಳನ್ನು ಮತ್ತು 120 ಕೋಟಿ ರೂಪಾಯಿಗಳನ್ನು ಆಫೀಸ್ ಕಟ್ಟಡಗಳಿಗೆ, ಪೋಲೀಸ್ ಸ್ಟೇಷನ್‌ಗಳಿಗೆ ಮತ್ತು ಟ್ರೈನಿಂಗ್ ಸೆಂಟರ್ಸ್‌ಗೆ ನಾವು ಖರ್ಚು ಮಾಡುತ್ತಿದ್ದೇವೆ. ಅದರಲ್ಲೂ ಗೊಡ್ಡ ದೊಡ್ಡ ಪಟ್ಟಣಗಳಲ್ಲಿ ಕಟ್ಟಡ ಇಲ್ಲ, ಅಥವಾ ಹೊಸದಾಗಿ ಆದಂಥ 7-8 ಜಿಲ್ಲೆಗಳಿಗೆ ಸ್ವಂತ ಕಟ್ಟಡ ಇಲ್ಲ ಅಂಥ ಕಡೆ ಈ 120 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಒಳ್ಳೆಯ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ತಾವು ಹೇಳಿದಹಾಗೆ ಬಜೆಟ್ ಪ್ರಾವಿಜನ್‌ನಲ್ಲಿ ಕೆಲವು ಕೊರತೆಗಳಿವೆ. ನಿಜ. ನಮಗೆ 12 ತಿಂಗಳಿಗೆ ಬಜೆಟ್‌ನಲ್ಲಿ ಇಟ್ಟಂಥ ಹಣ ಕೆಲವು ಸಲ 7 ತಿಂಗಳಲ್ಲಿಯೇ ಖರ್ಚು ಆಗಿಹೋಗುತ್ತದೆ. ಈಗ ಡಾ: ರಾಜ್‌ಕುಮಾರ್ ಅವರ ಇನ್ಸಿಡೆಂಟ್‌ನಲ್ಲಿ ಮೂರು ತಿಂಗಳು ಎಲ್ಲಾ ಪೋಲೀಸರು ರಸ್ತೆ ಮೇಲೆ, ಡ್ಯೂಟಿ ಮೇಲೆ, ಇದ್ದರೆ ಅವರಿಗೆ ಭತ್ಯೆ ಹೊರಗಿನಿಂದ ಬರತಕ್ಕಂಥ ಪೋಲೀಸ್ ಫೋರ್ಸ್‌ಗೆ ಭತ್ಯೆ ಕೊಡಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಮಹದೇಶ್ವರ ಬೆಟ್ಟದಲ್ಲಿ ಕೆಲಸ ಮಾಡತಕ್ಕಂಥ ಪೋಲೀಸರಿಗೆ ಹಿಲ್‌ಸ್ಟೇಷನ್ ಭತ್ಯೆಯನ್ನು ಕೊಟ್ಟಿಲ್ಲ. ದಯಮಾಡಿ ಅದನ್ನು ಆದಷ್ಟು ಬೇಗ ಬಿಡುಗಡೆ ಮಾಡಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಈ ಬಗ್ಗೆ ಇನ್ನೂ ಕೂಡ ಮಾಜಿ ಗೃಹಸಚಿವರ ಬಳಿಗೆಹೋಗಿ ಅವರು ಹೇಳುತ್ತಿದ್ದಾರೆ. ನನ್ನ ಹತ್ತಿರ ಬಂದು ಹೇಳಿದ್ದರೆ ನಾನು ಹಣಕಾಸು ಇಲಾಖೆಯೊಂದಿಗೆ ಮಾತನಾಡಿ ಹಣ ಬಿಡುಗಡೆ ಆಗುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೆ. ಅದು ಏನೇ ಇರಲಿ, ಒಟ್ಟಿನಲ್ಲಿ ಬಜೆಟ್‌ನಲ್ಲಿ ಹಣದ ಕೊರತೆ ಇದೆ. ಏಕೆಂದರೆ ಅನ್‌ಫೋರ್‌ಸೀನ್ ಇನ್ಸಿಡೆಂಟ್‌ಗಳು ಆಗುತ್ತವೆ. ಎಷ್ಟು ಖರ್ಚಾಗಬಹುದೆಂದು ಒಂದು ಅಂದಾಜು ಮಾಡಿ ಬಜೆಟ್‌ನಲ್ಲಿ ಅಷ್ಟು ಹಣ ಇಡುತ್ತಾರೆ. ಇಂಥ ತೊಂದರೆಗಳು ಬಂದಾಗ ಹೆಚ್ಚಿಗೆ ಹಣ ಬೇಕಾಗುತ್ತದೆ. ಅದಕ್ಕೆ ಯಾವಾಗ ಯಾವಾಗ ಹಣ ಬೇಕೋ ಅಂಥ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಂಡು ಹಣವನ್ನು ತೆಗೆದುಕೊಳ್ಳತಕ್ಕಂಥ ಪ್ರಯತ್ನವನ್ನು ಮಾಡಿದ್ದೇವೆ ಮತ್ತು ಅವರೂ ಕೂಡ ಹಣ ಬಿಡುಗಡೆ ಮಾಡತಕ್ಕಂಥ ಪ್ರಯತ್ನವನ್ನು ಮಾಡುತ್ತಿದ್ದಾರೆ ಕಂಪ್ಯೂಟರೈಜೇಷನ್ ಬಗ್ಗೆ ಕೂಡ ಅವರು ಹಣವನ್ನು ಬಿಡುಗಡೆ ಮಾಡಿದ್ದಾರೆ. ಹಿಂದಿನ ಸರ್ಕಾರದವರು ಪೋಲೀಸ್ ಇಲಾಖೆಗೆ ಕೆಲವು ವೆಹಿಕಲ್ಸ್‌ನ್ನು ಕೊಟ್ಟಿದ್ದರು. ಅದು ಆದಮೇಲೆ ಈಗ ಒಂದೇ ವರ್ಷದಲ್ಲಿ ಸುಮಾರು 100

ಜೀಪುಗಳನ್ನು ನಾವು ಕೊಟ್ಟಿದ್ದೇವೆ. ಮಾನ್ಯ ಸಿಂಧ್ಯಾರವರು ಮಾತನಾಡುತ್ತಾ ಎಂ.ಎಂ. ಹಿಲ್ಸ್‌ಗೆ ಹೋಗಬೇಕಾದರೆ ಬಹಳ ಹಳೆಯ ಪೊಲೀಸ್ ಜೀಪುಗಳನ್ನು ಕೊಟ್ಟಿದ್ದಾರೆಂದು ಹೇಳಿದರು. ತಾವು ಎಂ.ಎಂ. ಹಿಲ್ಸ್‌ಗೆ ಹೋಗುವಾಗ ಒಳ್ಳೆಯ ಜೀಪ್‌ನ್ನು ತಮಗೆ ಎಲ್ಲಿಕಾರ್ಟ್‌ನಲ್ಲಿ, ಫೈಲೆಟ್‌ನಲ್ಲಿ ಕೊಟ್ಟು ಕಳುಹಿಸುತ್ತೇವೆ. ವಿಶೇಷವಾಗಿ ಗಡಿಭಾಗದಲ್ಲಿ ಪೀಪಲ್ಸ್ ವಾರ್‌ಗ್ರೂಪ್ ಇರುವಂಥ ಕಡೆ ಅಥವಾ ಚಾಮರಾಜನಗರ, ರಾಯಚೂರು ಇಂಥ ಭಾಗದಲ್ಲಿಗೆ ನಾವು ಹೊಸ ಜೀಪುಗಳನ್ನು ಕೊಟ್ಟಿದ್ದೇವೆ. ಇನ್ನು ವೆಪನ್ಸ್‌ನ್ನು ಮಾತ್ರ ರಿಪ್ಲೇಸ್ ಮಾಡಬೇಕಾಗಿದೆ. ಈ ವೆಪನ್ಸ್ ಬೇಕೆಂದು ದುಡ್ಡು ಕೊಟ್ಟರೂ ಬೇಗನೆ ಸಿಗುವುದಿಲ್ಲ. ಏಕೆಂದರೆ ಮ್ಯಾನುಫಾಕ್ಚರ್ ಆಗುವುದಿಲ್ಲ. ತಮಗೆ ಗೊತ್ತಿರುವ ಹಾಗೆ ವೆಪನ್ಸ್ ಪಡೆಯುವುದಕ್ಕೆ ಆರ್ಡರ್ ಕೊಡಬೇಕು, ಅದಕ್ಕೆ ಆರು ತಿಂಗಳು ಅಥವಾ ಒಂದು ವರ್ಷ ಕಾಯಬೇಕು. ನಮಗೆ ಕೊಡತಕ್ಕಂಥ ಹಣದಲ್ಲಿ ಕಟ್ ಮಾಡಿಕೊಳ್ಳಿ, ಆದಷ್ಟು ಹೊಸ ವೆಪನ್ಸ್ ಕೊಡಿ ಎಂದು ನಾವು ಕೇಂದ್ರ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇವೆ. ಜೊತೆಗೆ ಪೋಲೀಸ್ ಇಲಾಖೆಯನ್ನು ಮಾಡರ್ನೈಸ್ ಮಾಡತಕ್ಕಂಥಾದ್ದು ಮತ್ತು ಎಂಟ್ಯಾರ್ ಡಿಪಾರ್ಟ್‌ಮೆಂಟ್‌ಗೆ ಹೊಸ ಆಯುಧಗಳನ್ನು ಕೊಡತಕ್ಕಂಥ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಕೆ.ಎನ್. ಸುಬ್ಬಾರೆಡ್ಡಿಯವರು ಮಾತನಾಡುತ್ತಾ ಸಿಂಡಿಕೇಟ್ ಎಂದರೇನು ಎಂದು ಕೇಳಿದರು. ಸಿಂಡಿಕೇಟ್ ಎಂದರೆ ಕ್ರಿಮ್ ಮಾಡತಕ್ಕಂಥ ಗುಂಪು ಎನ್ನುವ ಅರ್ಥದಲ್ಲಿ ಇದನ್ನು ಉಪಯೋಗ ಮಾಡಿದ್ದೇವೆ. ಬಹುಶಃ ನಿಮಗೆ ಹಿಂದಿನ 1971ರ ಸಿಂಡಿಕೇಟ್, ಇಂಡಿಕೇಟ್ ಜ್ಞಾಪಕ ಬಂದಿರಬೇಕೆಂದು ತೋರುತ್ತದೆ. ಆದರೆ ಈ ಸಿಂಡಿಕೇಟ್ ಎಂದರೆ ಕ್ರಿಮ್ ಮಾಡತಕ್ಕಂಥ ಸಿಂಡಿಕೇಟ್, ಇದಕ್ಕೆ ಆ ಸಿಂಡಿಕೇಟ್ ಮೆಂಬರ್ ಒಬ್ಬನೇ ಇರಬಹುದು ಅಥವಾ ಇಬ್ಬರು ಇರಬಹುದು, ಅಥವಾ ಎರಡು ರಾಜ್ಯಗಳಲ್ಲಿರಬಹುದು, ಅಥವಾ ಅನೇಕ ರಾಜ್ಯಗಳಲ್ಲಿರಬಹುದು, ಅಥವಾ ಹೊರದೇಶದಲ್ಲಿ ಕೂಡ ಇರಬಹುದು. ಹೀಗೆ ಆ ಸಿಂಡಿಕೇಟ್ ಮೆಂಬರ್ಸ್ ಇರುತ್ತಾರೆ ಅಥವಾ ಆ ಆರ್ಗನೈಸ್ಡ್ ಕ್ರಿಮ್ ಕಮಿಟ್ ಮಾಡತಕ್ಕಂಥ ಜನ ದೇಶದಲ್ಲಿಷ್ಟೆ ಇರುವುದು ಮಾತ್ರವಲ್ಲದೆ ಅಂತರರಾಷ್ಟ್ರೀಯವಾಗಿದ್ದಲ್ಲಿ ಕೂಡ ಇರುತ್ತಾರೆ. ಆ ಒಂದು ದೃಷ್ಟಿಯಿಂದಲೇ ಈ ಕಾನೂನನ್ನು ನಾವು ಸದನದ ಮುಂದೆ ತಂದಿದ್ದೇವೆ. ಹಿಂದಿನ ಸರ್ಕಾರ ಈ ಬಗ್ಗೆ ಆಲೋಚನೆ ಮಾಡಿ ಇಟ್ಟಿದ್ದರು. ನಾವು ಇದನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿ ಒಂದು ರೂಪಕ್ಕೆ ತಂದಿದ್ದೇವೆ. ಮಾನ್ಯ ಸದಸ್ಯರೆಲ್ಲರೂ ಒಮ್ಮತದಿಂದ ಈ ಮಸೂದೆಯನ್ನು ಒಪ್ಪಿದ್ದೀರಿ. ಈ ಕಾನೂನನ್ನು ಸದ್ವಿನಿಯೋಗ ಮಾಡತಕ್ಕಂಥ ಎಲ್ಲಾ ಪ್ರಯತ್ನಗಳನ್ನು ನಾವು ಮಾಡುತ್ತೇವೆ. ಈ ಕಾನೂನು ಪ್ರಾಕ್ಟಿಕಲ್ ಆಗಿ ಬಂದಾಗ ಕೆಲವು ತೊಂದರೆಗಳು ಕಾಣಬಹುದು, ಇಂಪ್ಲಿಮೆಂಟ್ ಆದಾಗ ನ್ಯೂನತೆಗಳು ಏನಿವೆ ಎಂಬುದು ಗೊತ್ತಾಗುತ್ತದೆ. ಅಂಥ ನ್ಯೂನತೆಗಳು ಏನಾದರೂ ಕಂಡಬಂದರೆ ಅದಕ್ಕೆ ಏನಾದರೂ ತಿದ್ದುಪಡಿ ಮಾಡಬೇಕಾದಲ್ಲಿ, ಪುನಃ ಅದನ್ನು ಮಾಡಬಹುದು. ರಾಷ್ಟ್ರದಲ್ಲಿ, ರಾಷ್ಟ್ರೀಯ ಐಕ್ಯತೆಗೋಸ್ಕರ, ರಾಷ್ಟ್ರದಲ್ಲಿನ ಸಮಾಜಘಾತುಕ ಶಕ್ತಿಗಳನ್ನು

ದಮನಮಾಡುವುದಕ್ಕೋಸ್ಕರ ಎಲ್ಲಾ ಪ್ರಯತ್ನಗಳನ್ನು ನಾವು ನೀವು ಕೂಡಿ ಮಾಡೋಣ ಎನ್ನುವಲ್ಲಿಂಥ ಮಾತನ್ನು ಹೇಳಿ, ಈ ಮಸೂದೆಗೆ ಒಮ್ಮತದಿಂದ ಒಪ್ಪಿದ್ದಕ್ಕಾಗಿ ತಮಗೆಲ್ಲರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5.50 ಪಿ.ಎಂ.

ಶ್ರೀ ಎಸ್. ಯೋಗೀಶ್ ಭಟ್ :— ಎಲ್ಲಾ ತರಹದ ವಿಷಯುಗಳನ್ನೆದುರಿಸಿ, ಏನಾದರೂ ಜಪ್ತಿ ಮಾಡಿದಲ್ಲಿ, ಹೇಗೆ? ಉದಾಹರಣೆಗೆ ಮಂಗಳೂರಿನಲ್ಲಿ ಎರಡು ಕೋಟಿ ರೂಪಾಯಿಗಳ ಹೆರಾಯಿನ್ ಅನ್ನು ಜಪ್ತಿ ಮಾಡಿದ್ದಾರೆ. ಡೀಂಜರಸ್ ಎಲಿಮೆಂಟ್ಸ್ ಅನ್ನು ಹಿಡಿದ್ದಾರೆ. ಆದರೆ, ಅವರಿಗೆ ಗೌರವ ಕೊಡುವುದು, ಮುಖ್ಯಮಂತ್ರಿಗಳ ಪದಕ ಕೊಡುವುದು, ಈ ರೀತಿ ಪ್ರೋತ್ಸಾಹ ಕೊಡುವುದಾದರೂ ಬೇಡವೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಈಗಾಗಲೇ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದೀರಿ. ಅದೇ ರೀತಿ, ಶಿರಾದಲ್ಲಿಯೂ ಕೂಡ ಎರಡು ತಿಂಗಳ ಹಿಂದೆ ವಶಪಡಿಸಿಕೊಂಡಿದ್ದಾರೆ. ಪೊಲೀಸರು ಸಾಕಷ್ಟು ಒಳ್ಳೆಯ ಕೆಲಸ ಮಾಡಿದ್ದಾರೆ. ಖೋಟಾ ನೋಟನ್ನು ಕಂಡುಹಿಡಿದಿದ್ದು, ಖೋಟಾ ಸ್ಟಾಂಪ್ಸ್ ಮಾಡುವವರನ್ನು ಹಿಡಿದಿದ್ದು, ಲಾಟರಿ ಟಿಕೆಟ್ಸ್ ಅನ್ನು ಖೋಟಾ ಮಾಡಿ ಮಾರುತ್ತಿರುವವರನ್ನು ಅಂಟಿಕ್ಸ್ ಮಾಡುತ್ತಿದ್ದವರನ್ನು ಹಿಡಿದಿದ್ದಾರೆ. ಅವುಗಳನ್ನು ಪಟ್ಟಿ ಮಾಡಿ ಹೇಳುವ ಅವಶ್ಯಕತೆ ಇಲ್ಲ. ಆದರೆ, ಅವರನ್ನು ಗುರುತಿಸುವ ಸಲುವಾಗಿ ಅನೇಕ ಪದಕಗಳನ್ನು ಕೊಡುತ್ತೇವೆ. ಮುಖ್ಯಮಂತ್ರಿಗಳ ಪದಕವನ್ನೂ ಸಹ ಕೊಡುತ್ತೇವೆ. ಕೇಂದ್ರ ಸರ್ಕಾರಕ್ಕೂ ಸಹ ಶಿಫಾರಸ್ಸು ಮಾಡುತ್ತೇವೆ. ಆದರೆ, ತಾವು ಹೇಳಿದ ಹಾಗೆ, ಎಕ್ಸ್‌ಗ್ರೇಷಿಯಾ ಅಲೌನ್ಸ್‌ನಲ್ಲಿ ಕೇಂದ್ರದಲ್ಲಿ ಸಮ್ ಪರ್ಸೆಂಟೇಜ್ ಕೊಡುತ್ತಿದ್ದು, ಆ ಪದ್ಧತಿ ನಮ್ಮಲ್ಲಿಲ್ಲ. ಒಂದೇ ಕೇಸ್‌ನಲ್ಲಿ ನಾವೇನಾದರೂ ಒಪ್ಪಿಕೊಂಡರೆ, ನಾಳೆ ಎಲ್ಲಾ ಕಡೆ ಇದೇ ಪದ್ಧತಿ ಬರುತ್ತದೆ. ಅವರಿಗೆ ಗೌರವವನ್ನು ಕೊಡುವುದಕ್ಕೋಸ್ಕರ ಆರ್ಥಿಕ ಇನ್‌ಸೆಂಟೀವ್ ಏನಾದರೂ ಕೊಡುವ ಕುರಿತು ನಾವು ಪರಿಶೀಲಿಸುತ್ತಿದ್ದೇವೆ. ಇಂಥ ಕೇಸ್‌ಗಳನ್ನು ಹಿಡಿದು ಸರ್ಕಾರಕ್ಕೆ ಸಹಾಯ ಮಾಡಿದವರನ್ನು ಮತ್ತು ಸಮಾಜಕ್ಕೆ ಒಳ್ಳೆಯದನ್ನು ಮಾಡಿದವರನ್ನು ಪ್ರೋತ್ಸಾಹಿಸುವ ಸಲುವಾಗಿ ಯಾವುದಾದರೊಂದು ಯೋಜನೆ ಹಾಕಿಕೊಂಡು ಮಾಡುತ್ತೇವೆ.

ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೆ, ಸರ್ವೀಸ್‌ನಲ್ಲಿರುವ ಇಂಥವರಿಗೆ ಸಹಾಯ ಮಾಡುವ ದೃಷ್ಟಿಯನ್ನಿಟ್ಟುಕೊಂಡು, ರೆಕ್ರೂಟ್‌ಮೆಂಟ್‌ನಲ್ಲಿ ಬಾಕಿ ಉಳಿದಿರುವ ಕೆಲಸವನ್ನು ಮಾಡುತ್ತೇನೆಂದು ಈಗ ಬಾರಿ ಅವರು ಹೇಳಿದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ತಮಗೆ ಗೊತ್ತಿರುವ ಹಾಗೆ ಇನ್ ಸರ್ವೀಸ್‌ನವರಿಗೆ ರೂಲ್ಸ್ ಮಾಡಬೇಕಾಗಿತ್ತು. ಆದರೆ, ರೂಲ್ಸ್ ಮಾಡುವುದಕ್ಕೇ ಆರು

ತಿಂಗಳು ಹಿಡಿಯಿತು. ಪುನಃ ಅದಕ್ಕೇ ನೋ-ಅಬ್ಜೆಕ್ಷನ್ ಕಾಲ್ ಮಾಡಬೇಕಾಯಿತು. ಅದು ಎರಡು-ಮೂರು ತಿಂಗಳಾಯಿತು. ಸದ್ಯದಲ್ಲೇ ಅವರನ್ನು ಇಂಟರ್‌ವ್ಯೂ ಕರೆದು ಒಂದು ತಿಂಗಳಲ್ಲೇ ಇನ್ ಸರ್ವೀಸ್‌ನವರಿಗೆ ಮೊದಲನೆ ಸಲ ಸ್ಪೆಷಲ್ ರೆಕ್ರೂಟ್‌ಮೆಂಟ್ ಎಂದು ಮಾಡಿ, ಇನ್‌ಸೆಂಟೀವ್ ಎಂದು ಈ ಸರ್ಕಾರ ಕೊಡುತ್ತಿದೆ. ೧೫೦-೨೦೦ ಜಾಗಗಳನ್ನು ಅದರಲ್ಲಿ ನಾವು ತುಂಬುತ್ತೇವೆ.

ಶ್ರೀ ಬಿ.ಬಿ. ಶಿವಪ್ಪ :— ನಾನು ಬೆಳಿಗ್ಗೆ -ಸಾಯಂಕಾಲ ಪ್ರತಿನಿತ್ಯ ರಾಜಾಜಿನಗರದ ಕಡೆ ಹೋಗುತ್ತೇನೆ. ಅಲ್ಲಿ ಹೋಗುವ ವೆಹಿಕಲ್ಸ್‌ಗೆ ಲೆಕ್ಕವೇ ಇಲ್ಲ. ಸರ್ಕಾಲ್‌ನಲ್ಲಿ ಕೆಲಸಮಾಡುವ ಪೋಲೀಸರಿಗೆ ಮಾಸ್ಕ್‌ಗಳನ್ನು ಸಪ್ಲೈ ಮಾಡುವುದು ಮತ್ತು ಅದನ್ನು ಉಪಯೋಗಿಸಲೇಬೇಕೆಂಬ ನಿಯಮವನ್ನು ಕಡ್ಡಾಯ ಮಾಡಿದರೆ, ಅವರ ಆರೋಗ್ಯದ ದೃಷ್ಟಿಯಿಂದ ತುಂಬಾ ಒಳ್ಳೆಯದೆಂಬುದು ನನ್ನ ಸಲಹೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಅದಕ್ಕಾಗಿಯೇ ನಾವೀಗ ಬೆಂಗಳೂರು ಟ್ರಾಫಿಕ್ ಟ್ರಸ್ಟ್ ಅದಕ್ಕೆಂದೇ ಪ್ರತ್ಯೇಕ ಹಣವನ್ನು ಇಟ್ಟಿದ್ದು, ಲೈಟುಗಳು, ಮಾಸ್ಕ್‌ಗಳು ಮತ್ತು ಅನೇಕ ಯೋಜನೆಗಳನ್ನು ತಯಾರಿಸಿ, ಬೆಂಗಳೂರು ಪೋಲೀಸ್ ಕಮಿಷನರ್‌ರವರಿಗೆ ಅಥಾರಿಟಿ ಕೊಟ್ಟು, ಅವರೇ ಖರ್ಚು ಮಾಡುವಂಥಾದ್ದಕ್ಕೆ ಅನುಮತಿ ಕೊಟ್ಟು, ವ್ಯವಸ್ಥೆ ಮಾಡಿ, ಅವರಿಗೆ ಒಪ್ಪಿಸಿದ್ದೇವೆ. ಆ ಹಣ ಸಂಗ್ರಹವಾದ ಮೇಲೆ ನಾವು ಖಂಡಿತವಾಗಿಯೂ ಆ ಕೆಲಸ ಮಾಡುತ್ತೇವೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ,

``2000ನೇ ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ ವಿಧೇಯಕವನ್ನು ಪರ್ಯಾಲೋಚಿಸುವುದು.''

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

<u>ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು</u>

<u>ಖಂಡ 2-37</u>ರವರೆಗೆ

ಅಧ್ಯಕ್ಷರು :— ``ಖಂಡ 2 ರಿಂದ 37ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.''

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

(ಖಂಡ 2 ರಿಂದ 37ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ1 ಇತ್ಯಾದಿ

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಗೃಹ ಸಚಿವರು) :— ಮಾನ್ಯ ಅಧ್ಯಕ್ಷರೆ, 2000ರ ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, ``2000ರ ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

9. ಸರ್ಕಾರಿ ನಿರ್ಣಯ

ವಿಷಯ: :— ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ಅಧಿನಿಯಮ, 1994ರ ಬಗ್ಗೆ.

ಅಧ್ಯಕ್ಷರು :— ಸರ್ಕಾರಿ ನಿರ್ಣಯವನ್ನು ಮಂಡಿಸುವುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹಸಚಿವರು) :— ಮಾನ್ಯ ಅಧ್ಯಕ್ಷರೆ, ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ಅಧಿನಿಯಮ, 1994ರ (1994ರ ಕರ್ನಾಟಕ ಅಧಿನಿಯಮ 21) 2ನೇ ಪ್ರಕರಣದ (1)ನೇ ಉಪ ಪ್ರಕರಣದ (ಎ) ಖಂಡದ (iii)ನೇ ಉಪ ಖಂಡದಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ತನ್ನ ಅಧಿಸೂಚನೆ ಸಂಖ್ಯೆ : ಹೆಚ್‌ಡಿ : 240 ಎಸ್‌ಎಸ್‌ಟಿ : 2000, ದಿನಾಂಕ: 12-5-2000ದಲ್ಲಿ, ಕರ್ನಾಟಕ ಪದವಿ ಪೂರ್ವ ಶಿಕ್ಷಣಾಧಿಕಾರಿಗಳ, ಪ್ರಾಂಶುಪಾಲರ, ಉಪನ್ಯಾಸಕರ ಮತ್ತು